12 October 2026 Monday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ಸೂಚಿ

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 294 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಭಾವನಾಂತರಂಗ

ಅಂತರಂಗ ಸಂತೋಷ ಹೊಂದುವ ಕೆಲಸಗಳು, ಮನಸ್ಸಿಗೆ ಸದಾ ಸಂತೃಪ್ತಿ, ಉಲ್ಲಾಸ ನೀಡುತ್ತವೆ!

ಸ್ನೇಹಾ ಆನಂದ್

ಅಂಬಾವಿಲಾಸ ಅರಮನೆಯಲ್ಲಿ ಸಂಭ್ರಮದ ಖಾಸಗಿ ದರ್ಬಾರ್

ಮೈಸೂರು: ಅಂಬಾವಿಲಾಸ ಅರಮನೆಯ ದರ್ಬಾರ್ ಅಂಗಳದಲ್ಲಿ ಸಂಸದ ಹಾಗೂ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾನುವಾರ ಖಾಸಗಿ ದರ್ಬಾರ್ ನಡೆಸಿದರು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ನೇತೃತ್ವದಲ್ಲಿ ಅರಮನೆಯಲ್ಲಿ ನವರಾತ್ರಿಯ ಪೂಜಾ ವಿಧಾನಗಳು ಮುಂಜಾನೆ 5.30ರಿಂದಲೇ ಆರಂಭವಾದವು. ಬೆಳಿಗ್ಗೆ 6ರಿಂದ 7ರವರೆಗೆ ಸಿಂಹಾಸನಕ್ಕೆ ಸಿಂಹದ ಮೂರ್ತಿ ಜೋಡಿಸಿ, ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದರು. ನಂತರ ಚಾಮುಂಡಿ ತೊಟ್ಟಿಯಲ್ಲಿ ಯದುವೀರ್ ಅವರಿಗೆ ಹಾಗೂ ವಾಣಿವಿಲಾಸ ದೇವರ ಮನೆಯಲ್ಲಿ ತ್ರಿಷಿಕಾ ಕುಮಾರಿ ದೇವಿ ಒಡೆಯರ್ ಅವರಿಗೆ ಬೆಳಿಗ್ಗೆ 8.30ಕ್ಕೆ ಕಂಕಣ ಧಾರಣೆ ಮಾಡಲಾಯಿತು.

ಪಟ್ಟದ ಆನೆ ಶ್ರೀಕಂಠ, ನಿಶಾನೆ ಆನೆ ವಿಕಲವ್ಯ, ಪಟ್ಟದ ಕುದುರೆ, ಪಟ್ಟದ ಹಸು, ಪಟ್ಟದ ಒಂಟೆಗೆ ಕೋಡಿ ಸೋಮೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಆನೆ ಬಾಗಿಲಿಗೆ ಕರೆ ತರಲಾಯಿತು. ನಂತರ ಅವುಗಳಿಗೆ ಸವಾರಿ ತೊಟ್ಟಿಯಲ್ಲಿ ಯದುವೀರ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.

ಗಣಪತಿ, ಚಾಮುಂಡೇಶ್ವರಿ, ವಿಷ್ಣು, ಶಿವ, ಅಷ್ಟ ದಿಕ್ಪಾಲಕರ ಮತ್ತು ನವಗ್ರಹ ಪೂಜೆಯನ್ನು ನೆರವೇರಿಸಿದರು. ಕಳಶ ಪೂಜೆ ನಂತರ ಸಿಂಹಾಸನಕ್ಕೆ ಪೂಜೆ ಸಲ್ಲಿಸಲಾಯಿತು. ಸವಾರಿ ತೊಟ್ಟಿಯಿಂದ ಯದುವೀರ್ ಬಹುಪರಾಕ್ ಹೇಳಿ ಅವರನ್ನು ಸ್ವಾಗತಿಸಲಾಯಿತು.

ಪರಕಾಲ ಮಠ, ಶೃಂಗೇರಿ ಮಠ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ, ನಂಜನಗೂಡು ಶ್ರೀಕಂಠೇಶ್ವರ, ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರಸುಂದರಿ ಹಾಗೂ ಅರಮನೆ ಕೋಟೆಯೊಳಗಿನ ದೇವಾಲಯಗಳು ಸೇರಿದಂತೆ 23 ದೇವಾಲಯಗಳಿಂದ ತಂದಿದ್ದ ತೀರ್ಥವನ್ನು ಅರ್ಚಕರು ಯದುವೀರ್ ಅವರಿಗೆ ಪ್ರೋಕ್ಷಿಸಿದರು.

ಮಧ್ಯಾಹ್ನ 11.45 ರಿಂದ 12ರವರೆಗೆ ಯದುವೀರ್ ಸಿಂಹಾಸನಾರೋಹಣ ಮಾಡಿ ನಮಸ್ಕರಿಸಿದರು. ಸಂಸ್ಥಾನ ಗೀತೆ ಕಾಯೌ ಶ್ರೀ ಗೌರಿ ವಾದ್ಯ ಸಂಗೀತ ನುಡಿಸಲಾಯಿತು. ರಾಜಮನೆತನದ ಸದಸ್ಯರು ವಂದನೆ ಸಲ್ಲಿಸಿದರು.

ಪ್ರಮೋದಾದೇವಿ ಒಡೆಯರ್ ಅವರಿಗೆ ಯದುವೀರ್ ತಲೆಬಾಗಿ ನಮಿಸಿದರು. ಬಳಿಕ ಯದುವೀರ್ ಅವರಿಗೆ ತ್ರಿಷಿಕಾ ಕುಮಾರಿ ಒಡೆಯರ್ ಆರತಿ ಬೆಳಗಿ, ಪಾದಪೂಜೆ ಸಲ್ಲಿಸಿದರು.

ಅರಿತು ಬದುಕುವುದೇ 'ನಿಜ ಧರ್ಮ'

ದಸರಾ ಮಹೋತ್ಸವಕ್ಕೆ ಚಾಲನೆ । ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ ಸಂದೇಶ

ಮೈಸೂರು: ಧರ್ಮವೆಂದರೆ ಮನುಷ್ಯನನ್ನು ಸ್ವರ್ಗಕ್ಕೆ ಕರೆದೊಯ್ಯುವುದಲ್ಲ. ನಾವು ಬದುಕುತ್ತಿರುವ ಭೂಮಿಯನ್ನೇ ಸ್ವರ್ಗವನ್ನಾಗಿ ಮಾಡುವುದು. ತುಳಿದು ಬದುಕುವುದಲ್ಲ. ತಿಳಿದು ಬದುಕುವುದೇ ನಿಜವಾದ ಧರ್ಮ ಎಂದು ಕೊಪ್ಪಳ ಅಭಿನವ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ ಪ್ರತಿಪಾದಿಸಿದರು.

ಚಾಮುಂಡಿ ಬೆಟ್ಟದಲ್ಲಿ ಭಾನುವಾರ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಿನ ಸಾಂಸ್ಕೃತಿಕ ಪರಂಪರೆ, ಮೈಸೂರು ರಾಜಮನೆತನದ ಕೊಡುಗೆ, ಕನ್ನಡದ ಸಾಮರಸ್ಯದ ಪರಂಪರೆ ಹಾಗೂ ದುಡಿಮೆಯ ಮಹತ್ವವನ್ನು ಒತ್ತಿಹೇಳಿದರು.

ಮುಗಿಲಿನಿಂದ ಮಳೆ ಬರಬೇಕು. ಮಣ್ಣಿನಿಂದ ಬೆಳೆ ಬರಬೇಕು. ಜನರ ಬದುಕಿನಲ್ಲಿ ಕಳೆ ತುಂಬಬೇಕು ಎಂದು ಗವಿಸಿದ್ದೇಶ್ವರ ಶ್ರೀಗಳು ಆಶಿಸಿದರು. ಸಮಾಜದಲ್ಲಿ ಪ್ರೀತಿ, ಸಾಮರಸ್ಯ, ದುಡಿಮೆಯ ಗೌರವ ಮತ್ತು ಮಾನವೀಯ ಮೌಲ್ಯಗಳು ಬೆಳೆಯಬೇಕು ಎಂದು ಸಂದೇಶ ನೀಡಿದರು. ಮೈಸೂರು ದಸರಾ ಉದ್ಘಾಟನಾ ವೇದಿಕೆಯಿಂದ ಗವಿಸಿದ್ದೇಶ್ವರ ಸ್ವಾಮೀಜಿ ನೀಡಿದ ಈ ಸಂದೇಶವು ಉತ್ಸವದ ವೈಭವದ ಆಚೆಗೆ ಮಾನವೀಯತೆ, ಸಾಮಾಜಿಕ ಸಾಮರಸ್ಯ ನಾಡಿನ ಅಭಿವೃದ್ಧಿ ಅಗತ್ಯವನ್ನು ಎತ್ತಿಹಿಡಿಯಿತು.

ಹಿಂದೆ ದೊರೆಯ ಹಬ್ಬ ಇಂದು ಧರೆಯ ಹಬ್ಬ

ಒಂದು ಕಾಲದಲ್ಲಿ ದೊರೆಯ ಹಬ್ಬವಾಗಿದ್ದ ದಸರಾ ಇಂದು ಧರೆಯ ಹಬ್ಬವಾಗಿದೆ. ದಸರಾ ಎಂದರೆ ನಾಡಿನ ಗತವೈಭವ, ವರ್ತಮಾನ ಮತ್ತು ಭವಿಷ್ಯದ ಸಂಗಮ. ಅರಮನೆಗಳ ನಗರ, ಸಂಸ್ಕಾರವಂತರ ನಗರ, ಅರಿವಿನ ನಗರ, ಸಾಂಸ್ಕೃತಿಕ ನಗರ ಹಾಗೂ ಗುರುಮನೆಗಳ ನಗರ ಎಂಬ ಹೆಗ್ಗಳಿಕೆಗೆ ಮೈಸೂರು ಪಾತ್ರವಾಗಿದೆ ಎಂದು ಶ್ರೀಗಳು ಬಣ್ಣಿಸಿದರು.ತುಂಗಭದ್ರೆಯ ತೀರದಿಂದ ಕಾವೇರಿ ನಾಡಿಗೆ ಬಂದಿರುವುದಾಗಿ ಉಲ್ಲೇಖಿಸಿದ ಶ್ರೀಗಳು, ಮಹಾನವಮಿ ಗುಡ್ಡದ ಪರಂಪರೆಯ ವೈಭವವನ್ನು ಮೈಸೂರಿನ ದಸರಾ ಪ್ರತಿಬಿಂಬಿಸುತ್ತದೆ ಎಂದರು.

ಕಾಣದ ಕೈಗಳಿಗೆ ಶರಣು

ಇಂದು ಕಾಣುತ್ತಿರುವ ವೈಭವದ ಹಿಂದೆ ಕಾಣದ ಕೈಗಳಿವೆ. ಆ ಎಲ್ಲ ಶ್ರಮಜೀವಿಗಳಿಗೆ ನನ್ನ ಶರಣು, ಶರಣಾರ್ಥಿ. ದಸರಾ ಕೇವಲ ಉತ್ಸವವಾಗಿರದೆ ಜನರ ಪರಿಶ್ರಮ, ಸಂಸ್ಕೃತಿ ಮತ್ತು ಸಾಮೂಹಿಕ ಬದುಕಿನ ಪ್ರತೀಕವಾಗಬೇಕು ಎಂದು ಗವಿಸಿದ್ದೇಶ್ವರ ಸ್ವಾಮೀಜಿ ಸಂದೇಶ ನೀಡಿದರು. ದುಡಿಮೆಯನ್ನು ಪ್ರೀತಿಸಬೇಕೇ ಹೊರತು ಹಣವನ್ನಷ್ಟೇ ಆರಾಧಿಸಬಾರದು. ಶ್ರಮದ ಗೌರವ ಅರಿಯಬೇಕು. ದುಡಿದು ಬದುಕುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಕನ್ನಡದ ದೀಪ ಆರದಿರಲಿ

ದಸರಾ ಉದ್ಘಾಟನೆಗೆ ಬಂದಿರುವುದು ಕೇವಲ ಸಮಾರಂಭದಲ್ಲಿ ಪಾಲ್ಗೊಳ್ಳಲು ಅಲ್ಲ. ನಾಡಿಗೆ ಪ್ರಾರ್ಥನೆ ಸಲ್ಲಿಸಲು ಎಂದು ತಿಳಿಸಿದ ಗವಿಸಿದ್ದೇಶ್ವರ ಶ್ರೀಗಳು, ಹಿಂದಿನವರು ಕನ್ನಡದ ದೀಪ ಹಚ್ಚಿದ್ದಾರೆ. ಆ ಆಶಯದ ದೀಪ ಎಂದಿಗೂ ಆರದಿರಲಿ ಎಂಬ ಪ್ರಾರ್ಥನೆಯೊಂದಿಗೆ ಇಲ್ಲಿಗೆ ಬಂದಿದ್ದೇನೆ ಎಂದು ತಿಳಿಸಿದರು. ಆದಿಕವಿ ಪಂಪನಿಂದ ರಾಷ್ಟ್ರಕವಿ ಕುವೆಂಪುವರೆಗಿನ ಕನ್ನಡ ಸಾಹಿತ್ಯ ಪರಂಪರೆ ಸಾಮರಸ್ಯದ ಸಂದೇಶ ಸಾರುತ್ತದೆ. ನೀತಿ ಮತ್ತು ಪ್ರೀತಿಯ ನೆಲೆಯಲ್ಲಿ ನಾಡು ಕಟ್ಟಬೇಕು. ಗ್ರಂಥಗಳು ಬೇರೆ ಇರಬಹುದು, ಪಂಥಗಳು ಬೇರೆ ಇರಬಹುದು. ಆದರೆ ಪುಟ 2ಕ್ಕೆ

'ಪ್ರಜಾಪ್ರಭುತ್ವದ ಹಬ್ಬ'ಕ್ಕೆ ಚಾಲನೆ

ಮೈಸೂರು: ದಸರಾ ಮಹೋತ್ಸವ ಪ್ರಯುಕ್ತ ಪ್ರಜಾಪ್ರಭುತ್ವದ ಹಬ್ಬ ಪರಿಕಲ್ಪನೆಯಲ್ಲಿ ನಗರದ ಕುಪ್ಪಣ್ಣ ಪಾರ್ಕ್‌ನಲ್ಲಿ ದಸರಾ ಫಲಪುಷ್ಪ ಪ್ರದರ್ಶನವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.

ಗಾಜಿನ ಮನೆಯಲ್ಲಿ 2 ಲಕ್ಷ ಕೆಂಪು ಗುಲಾಬಿ, 4 ಸಾವಿರ ಸೇವಂತಿಗೆ ಹಾಗೂ 25 ಸಾವಿರ ಗ್ರೀನ್ ಫೋಲಿಯೇಜ್ (ಹಸಿರೆಲೆ) ಗಳನ್ನು ಬಳಸಿ ರಚಿಸಿರುವ ವಿಧಾನ ಸೌಧದ ಪ್ರತಿಕೃತಿ ಗಮನಸೆಳೆಯಿತು.

ಸುತ್ತಲೂ ಕೋಲ್ಕತ್ತಾ, ಊಟಿ, ಪುಣೆ, ಬೆಂಗಳೂರು ಹಾಗೂ ಹಾಸನ ಸೇರಿದಂತೆ ವಿವಿಧೆಡೆಗಳಿಂದ ತಂದ ಪುಷ್ಪಗಳು, ಗಿಡಗಳು, ಬೋನ್ಸಾಯ್ ಸಸ್ಯಗಳನ್ನು ಪ್ರದರ್ಶನ ಇಡಲಾಗಿದೆ.

ಹೊರಾಂಗಣದಲ್ಲಿ ಚಿಕ್ಕಗಡಿಯಾರದ ಪುಷ್ಪ ಪ್ರತಿರೂಪ, ಅರಮನೆ ಮಂಡಳಿಯಿಂದ ಸಿಂಹಾಸನಾರೂಢ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪುಷ್ಪಕೃತಿ, ಪ್ರಜಾಪ್ರಭುತ್ವದ ಮೂರು ಸ್ತಂಭಗಳು, ವಿದ್ಯುನ್ಮಾನ ಮತಯಂತ್ರ ಹಾಗೂ ನನ್ನ ಮತ–ನನ್ನ ಹಕ್ಕು–ನನ್ನ ಹೊಣೆ ಘೋಷವಾಕ್ಯದೊಂದಿಗೆ ಮತದಾನ ಜಾಗೃತಿ ಫಲಪುಷ್ಪ ಪ್ರತಿಕೃತಿಗಳು ಪ್ರವಾಸಿಗರನ್ನು ಆಕರ್ಷಿಸಿತು.

ಬಾಲಿ ಶೈಲಿಯ ಬಾನೂರ್ ಕಲೆಯ (ಇಂಡೋನೇಷಿಯನ್ ತೆಂಗಿನ ಗರಿಯ ಕಲಾಕೃತಿ) ಸರಣಿ ಸ್ವಾಗತ ಕಮಾನು ಪ್ರದರ್ಶನದ ಅಂದ ಹೆಚ್ಚಿಸಿತು.

ಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ಮತದಾನ ಉಳಿಸುವುದು ನಮ್ಮ ಹಕ್ಕು. ಕೆಲವರಿಂದ ಮತದಾನ ಅಳಿಸುವ ಪ್ರಯತ್ನವಾಗುತ್ತಿದೆ. ಮತದಾನ ಉಳಿಸುವ ಆಶಯದಿಂದ ಫಲಪುಷ್ಪ ಪ್ರದರ್ಶನದಲ್ಲಿ ಪ್ರಜಾಪ್ರಭುತ್ವದ ಆಶಯ ಇಟ್ಟುಕೊಂಡು ಕಲಾಕೃತಿ ರಚಿಸಲಾಗಿದೆ ಎಂದರು.

ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಸಚಿವ ಪುಟ್ಟರಂಗ ಶೆಟ್ಟಿ, ಶಾಸಕರಾದ ಅನಿಲ್ ಚಿಕ್ಕಮಾದು, ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಣ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಇದ್ದರು.

ರಾಜಮನೆತನದ ಕೊಡುಗೆ ಸ್ಮರಣೀಯ

ಮೈಸೂರು: ರಾಜಮನೆತನವನ್ನು ಹೊರಗಿಟ್ಟು ಕರ್ನಾಟಕದ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಶಿಕ್ಷಣ ಮತ್ತು ಜ್ಞಾನ ಕ್ಷೇತ್ರಗಳ ಬೆಳವಣಿಗೆಗೆ ರಾಜಮನೆತನ ನೀಡಿದ ಕೊಡುಗೆಯನ್ನು ಸ್ಮರಿಸಿದರು. ಮೈಸೂರು ವಿಶ್ವವಿದ್ಯಾಲಯ ಸೇರಿದಂತೆ ಹಲವು ಶೈಕ್ಷಣಿಕ ಸಂಸ್ಥೆಗಳ ಬೆಳವಣಿಗೆಯಲ್ಲಿ ಮೈಸೂರಿನ ಐತಿಹಾಸಿಕ ಪರಂಪರೆಯ ಪಾತ್ರ ಮಹತ್ವದ್ದಾಗಿದೆ ಎಂದು ಗವಿಸಿದ್ದೇಶ್ವರ ಶ್ರೀಗಳು ತಿಳಿಸಿದರು.

ಬುದ್ಧನ ಸಂದೇಶವನ್ನು ಸ್ಮರಿಸಿದ ಅವರು, ಬೆಳಕಾಗು ಎಂಬ ಆಶಯದಂತೆ ಪ್ರತಿಯೊಬ್ಬರೂ ಸಮಾಜಕ್ಕೆ ಬೆಳಕಾಗಬೇಕು. ಅರಮನೆಯಿಂದ ಬಂದ ಸಾಹಿತ್ಯಕ್ಕಿಂತ ಮಣ್ಣಿನಿಂದ, ಜನಜೀವನದಿಂದ ಮೂಡಿಬಂದ ಸಾಹಿತ್ಯಕ್ಕೂ ಅಪಾರ ಮೌಲ್ಯವಿದೆ ಎಂದು ಪ್ರತಿಪಾದಿಸಿದರು.

50ಕ್ಕೂ ಹೆಚ್ಚು ಮಠಾಧೀಶರು ಭಾಗಿ

ನಾಡಹಬ್ಬ ದಸರೆಯಲ್ಲಿ ಮೊದಲ ಬಾರಿಗೆ ನೂರಕ್ಕೂ ಹೆಚ್ಚು ಅಧಿಕ ಮಠಾಧೀಶರಿಗೆ ಆಹ್ವಾನ ಮಾಡಲಾಗಿತ್ತು. 50ಕ್ಕೂ ಹೆಚ್ಚು ಮಠಾಧೀಶರು ಆಗಮಿಸಿದ್ದರು. ಮಾತ್ರವಲ್ಲದೆ, ಪಂಜಾಬ್, ಟಿಬೇಟಿಯನ್, ಕ್ರಿಶ್ಚಿಯನ್ ಧರ್ಮಗುರುಗಳು ಸಹ ಭಾಗಿಯಾಗಿದ್ದರು. ಎಲ್ಲರಿಗೂ ಸುತ್ತೂರು ಮಠದಲ್ಲಿ ಗೌರವ ಅತಿಥ್ಯ ಏರ್ಪಡಿಸಲಾಗಿತ್ತು

ಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ಮಠಾಧೀಶರು ಈ ನೆಲದ ಆಸ್ತಿ ಅವರ ಮೇಲೆ ನಮಗೆ ಅಪಾರ ಗೌರವವಿದೆ. ನಮ್ಮ ಅವರ ಒಡನಾಟ ಭಕ್ತ ಹಾಗೂ ದೇವರ ನಡುವಿನ ಒಡನಾಟ ನನ್ನ ಹೇಳಿಕೆಯನ್ನು ತಪ್ಪಾಗಿ ಪುಟ 2ಕ್ಕೆ

ಚಾಮುಂಡೇಶ್ವರಿಗೆ ಅಗ್ರಪೂಜೆ

ಮೈಸೂರು: ಚಾಮುಂಡಿ ಬೆಟ್ಟದಲ್ಲಿ ನಾಡ ಅಧಿದೇವತೆ ಚಾಮುಂಡೇಶ್ವರಿ ತಾಯಿಗೆ ಅಗ್ರ ಪೂಜೆ ಹಾಗೂ ಸಾಂಪ್ರದಾಯಿಕ ಪುಷ್ಪಾರ್ಚನೆ ಮಾಡುವ ಮೂಲಕ 11 ದಿನಗಳ ನಾಡಹಬ್ಬ ದಸರಾಗೆ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.

ಭಾನುವಾರ ಬೆಳಗ್ಗೆ 11:50ರಿಂದ 12.13 ರವರೆಗಿನ ಶುಭ ಧನುರ್ ಲಗ್ನದಲ್ಲಿ ದಸರಾ ಉದ್ಘಾಟನೆ ಮಾಡಲಾಯಿತು. ಈ ಸಂದರ್ಭ ಕೊಪ್ಪಳದ ಅಭಿನವ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು.

ನಗರದಲ್ಲಿ ಹಲವಾರು ದಸರಾ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ಅಕ್ಟೋಬರ್ 21 ರವರೆಗೆ ದಸರಾ ಕಾರ್ಯಕ್ರಮಗಳು ನಡೆಯಲಿವೆ.

ನಾಡಹಬ್ಬ ದಸರಾ ಆರಂಭವಾಗುವುದೇ ಶಕ್ತಿ ದೇವತೆ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುವ ಮೂಲಕ. ಈ ಹಿನ್ನೆಲೆಯಲ್ಲಿ ಅರಮನೆಯಿಂದ ಅಮ್ಮನವರ ಉತ್ಸವಮೂರ್ತಿಯನ್ನು ಚಾಮುಂಡಿ ಬೆಟ್ಟಕ್ಕೆ ಸಾಂಪ್ರದಾಯಿಕವಾಗಿ ಕರೆತರಲಾಯಿತು. ವಿಶೇಷವಾಗಿ ತಾಯಿಯನ್ನು ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಿಲಾಯಿತು. ನವರಾತ್ರಿಯ ಮೊದಲ ಪುಟ 2ಕ್ಕೆ

ಪುಷ್ಪಮೇಳ ಉದ್ಘಾಟನೆ

ಮೈಸೂರು: ದಸರಾ ಅಂಗವಾಗಿ, ನಗರದ ಪ್ರಮುಖ ಹಸಿರು ತಾಣವಾದ ಲಿಂಗಾಂಬುಧಿ ಸಸ್ಯೋದ್ಯಾನದಲ್ಲಿ ಆಯೋಜಿಸಿರುವ ಪುಷ್ಪ ಮೇಳ ಮತ್ತು ಸಸ್ಯತೋಟ ಭೇಟಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಭಾನುವಾರ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ನಗರಗಳ ಅಭಿವೃದ್ಧಿ ಎಷ್ಟು ಮುಖ್ಯವೋ, ಪರಿಸರದ ಸಮತೋಲನ ಹಾಗೂ ಹಸಿರನ್ನು ಉಳಿಸುವುದು ಅಷ್ಟೇ ಅತ್ಯಗತ್ಯ ಎಂದರು.

ಈ ಬಾರಿಯ ದಸರಾ ಪುಷ್ಪಮೇಳದಲ್ಲಿ ಪ್ರದರ್ಶಿಸಲಾದ 49 ಬಗೆಯ 35ಸಾವಿರ ಆಲಂಕಾರಿಕ ಪುಷ್ಪ ಕುಂಡಗಳು ಮತ್ತು ಕಲಾತ್ಮಕವಾಗಿ ರೂಪಿಸಲಾದ ಮನಮೋಹಕ ಹೂವಿನ ಕಲಾಕೃತಿಗಳು ದೇಶ, ವಿದೇಶಗಳಿಂದ ಆಗಮಿಸುವ ಪ್ರವಾಸಿಗರನ್ನು ವಿಶೇಷವಾಗಿ ಆಕರ್ಷಿಸುತ್ತಿವೆ ಎಂದು ಹೇಳಿದರು.

ಮುರಿದು ಬಿದ್ದ ನಂದಿಧ್ವಜ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ಮುನ್ನ ಅಚಾತುರ್ಯ ನಡೆದಿದೆ. ಚಾಮುಂಡಿ ಬೆಟ್ಟದಲ್ಲಿ ಸಿದ್ಧತೆ ನಡೆಯುತ್ತಿದ್ದ ವೇಳೆ ಪೂಜೆಗೆ ತರಲಾಗಿದ್ದ ಎರಡು ನಂದಿ ಧ್ವಜಗಳ ಪೈಕಿ ಒಂದು ಮುರಿದುಬಿದ್ದಿದೆ.

ಪ್ರತಿವರ್ಷ ದಸರಾ ಉದ್ಘಾಟನೆಗೂ ಮುನ್ನ ನಂದಿಧ್ವಜಕ್ಕೆ ಪೂಜೆ ಸಲ್ಲಿಸುವುದು ಸಂಪ್ರದಾಯ. ಉಡಿಗಾಲ ಮಹದೇವಪ್ಪ ಮತ್ತು ತಂಡ ಜೋಡಿ ನಂದಿ ಧ್ವಜಗಳೊಂದಿಗೆ ಆಗಮಿಸಿತ್ತು. ಮಹಿಷಾಸುರ ಪ್ರತಿಮೆ ವೃತ್ತದ ಬಳಿ ನಂದಿ ಕಂಬವನ್ನು ನೆಡುವಾಗ ಒಂದು ಕಂಬ ಮುರಿದುಬಿದ್ದಿದೆ. ಬಳಿಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಳಿದ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದರು.

ರಾಜರ ಕಾಲದಲ್ಲಿಯೂ ನಂದಿ ಧ್ವಜ ತಂಡವನ್ನು ಓಲಗ, ಬಿರುದಾವಳಿ, ಗೌರವಾದರಗಳೊಡನೆ ಅರಮನೆಗೆ ಕರೆದೊಯ್ದು, ಅಂಬಾ ವಿಲಾಸ ಅರಮನೆಯಲ್ಲಿ ಸತ್ಕರಿಸಿ ಬಳಿಕ ತಂಡವನ್ನು ಅರಮನೆ ಬಲರಾಮ ದ್ವಾರದ ಬಳಿಗೆ ಕರೆದೊಯ್ಯುತ್ತಾರೆ. ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದ ಬಳಿಕ ಮೆರವಣಿಗೆಗೆ ಚಾಲನೆ ನೀಡಲಾಗುತ್ತಿತ್ತು. ಈಗಲೂ ಚಾಮುಂಡಿ ಬೆಟ್ಟದಲ್ಲಿ ನವರಾತ್ರಿ ಚಾಲನೆ ವೇಳೆ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಲಾಗುತ್ತದೆ.

ಡಿಕೆಶಿಯೇ 'ಸ್ಟಿಂಗ್ ಕಿಂಗ್‌ಪಿನ್'

ಸ್ಟಿಂಗ್ ಆಪರೇಷನ್ ವರದಿ ಕೊಟ್ಟಿದ್ದು ಯಾರು? ಎಚ್.ಡಿ.ಕುಮಾರಸ್ವಾಮಿ ಪ್ರಶ್ನೆ

ಬೆಂಗಳೂರು: ನಗರದ ವಸಂತನಗರದ ಖಾಸಗಿ ಹೋಟೆಲ್‌ನಲ್ಲಿ ಸಿಎಂ ಒಬ್ಬರನ್ನ ಭೇಟಿ ಮಾಡಿದ್ದರು. ಆ ವ್ಯಕ್ತಿಯೇ ಸ್ಟಿಂಗ್ ಆಪರೇಷನ್ ವ್ಯಕ್ತಿ. ಆ ವ್ಯಕ್ತಿ ಯಾರು ಎಂಬುದನ್ನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಬೇಕು. ಆ ವ್ಯಕ್ತಿಯೇ ಸ್ಟಿಂಗ್ ಆಪರೇಷನ್ ವರದಿ ಕೊಟ್ಟರಾ? ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಬೆಂಗಳೂರಿನಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಡಿಕೆ ಶಿವಕುಮಾರ್ ಅವರ ಸ್ಟಿಂಗ್ ಆಪರೇಷನ್ ಹೇಳಿಕೆಗೆ ತಿರುಗೇಟು ನೀಡಿದರು. ಸ್ಟಿಂಗ್ ಆಪರೇಷನ್ ಪಿತಾಮಹ, ಮಹಾನಾಯಕ, ಕಿಂಗ್‌ಪಿನ್, ಸಾಮ್ರಾಟ್ ಎಂದು ಕರೆಯುವ ಸಿಎಂ ಅವರೇ ಸ್ಟಿಂಗ್ ಆಪರೇಷನ್ ಪರಿಣಿತರು ಎಂದು ಕುಟುಕಿದರು.

ಆ ವ್ಯಕ್ತಿಯನ್ನ ಭೇಟಿ ಮಾಡಿದ ಬ

ಸಿಎಂ ಕಪ್ 2026ಕ್ಕೆ ಡಿಸಿಎಂ ಚಾಲನೆ

ದಸರಾ ಕ್ರೀಡಾಕೂಟ । ವಿಜೇತರಿಗೆ ನಗದು ಬಹುಮಾನ ಹೆಚ್ಚಳ: ಪರಂ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಗರದ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿರುವ 'ದಸರಾ ಕ್ರೀಡಾಕೂಟ ಸಿಎಂ ಕಪ್–2026'ಕ್ಕೆ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಚಾಲನೆ ನೀಡಿದರು. ಕಂದಾಯ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರೂ ಆಗಿರುವ ಅವರು, ಕ್ರೀಡಾಪಟುಗಳಿಗೆ ಸರ್ಕಾರದಿಂದ ಎಲ್ಲ ರೀತಿಯ ಪ್ರೋತ್ಸಾಹ ಹಾಗೂ ಬೆಂಬಲ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಶುಸಂಗೋಪನಾ ಸಚಿವ ಸಿ. ಪುಟ್ಟರಂಗಶೆಟ್ಟಿ, ಶಾಸಕ ಡಿ. ರವಿಶಂಕರ್, ಶಾಸಕ ಅನಿಲ್ ಚಿಕ್ಕಮಾದು, ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಮಾಚಯ್ಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಆಯುಕ್ತ ಎಂ.ಎನ್. ಅನುಚೇತ್, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಜಂಟಿ ನಿರ್ದೇಶಕ ಜಿತೇಂದ್ರ ಶೆಟ್ಟಿ, ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಉದ್ಯೋಗಕ್ಕಾಗಿ ಕ್ರೀಡಾಪಟುಗಳ ವಲಸೆ ತಪ್ಪಲಿದೆ

ವಿಧಾನ ಪರಿಷತ್ ಸದಸ್ಯ ಡಾ. ಕೆ. ಗೋವಿಂದ ರಾಜ್ ಮಾತನಾಡಿ, ಏಷ್ಯನ್ ಗೇಮ್ಸ್‌ನಲ್ಲಿ ವಿಜೇತರಾಗುವ ಕ್ರೀಡಾಪಟುಗಳಿಗೆ ಸರ್ಕಾರ ಗೌರವ ಧನ ಹೆಚ್ಚಿಸಿದೆ. ಉದ್ಯೋಗದಲ್ಲಿ ಶೇ.2ರಷ್ಟು ಮೀಸಲಾತಿ ನೀಡುವ ಮೂಲಕ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುತ್ತಿದೆ. ಇದರಿಂದ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳು ಉದ್ಯೋಗ ಅರಸಿಕೊಂಡು ಬೇರೆಡೆಗೆ ವಲಸೆ ಹೋಗುವುದು ತಪ್ಪಲಿದೆ ಎಂದು ಹೇಳಿದರು.

ಜಿಲ್ಲಾ ಮಟ್ಟದಲ್ಲೇ ಉತ್ತಮ ತರಬೇತಿ ಸೌಲಭ್ಯ ಕಲ್ಪಿಸಿ

ಶಾಸಕ ತನ್ವೀರ್ ಸೇಠ್ ಮಾತನಾಡಿ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ತರಬೇತಿ ಪಡೆಯುವ ಕ್ರೀಡಾಪಟುಗಳಿಗೆ ಜಿಲ್ಲಾ ಹಂತದಲ್ಲೇ ಉತ್ತಮ ಸೌಲಭ್ಯಗಳನ್ನು ಒದಗಿಸಬೇಕು. ಆ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಪಟುಗಳು ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೇರೇಪಿಸಬೇಕು ಎಂದು ಹೇಳಿದರು.

ಕ್ರೀಡಾಪಟುಗಳಿಗೆ ಸನ್ಮಾನ

ಇದೇ ಸಂದರ್ಭದಲ್ಲಿ ದಸರಾ ಕ್ರೀಡಾಕೂಟದ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಗಾಲ್ಫ್ ಕ್ರೀಡಾಪಟು ಪ್ರಣವಿ ಎಸ್. ಅರಸ್ ಹಾಗೂ ಕಾಮನ್ವೆಲ್ತ್ ಗೇಮ್ಸ್ ಪದಕ ವಿಜೇತೆ ಪ್ಯಾರಾ ಅಥ್ಲೆಟಿಕ್ಸ್ ಕ್ರೀಡಾಪಟು ಕೆ.ಎಸ್. ಶಿಲ್ಪಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕ್ರೀಡಾಪಟುಗಳಿಗೆ ಸರ್ಕಾರದ ಪ್ರೋತ್ಸಾಹ

ಈ ಸಂದರ್ಭದಲ್ಲಿ ಮಾತನಾಡಿದ ಡಾ.ಜಿ.ಪರಮೇಶ್ವರ, ನೂರಾರು ವರ್ಷಗಳ ಇತಿಹಾಸ ಹೊಂದಿರುವ ದಸರಾ ಉತ್ಸವದಲ್ಲಿ ಅಂದಿನ ವಿಜಯನಗರದ ಅರಸರು ಸೇರಿದಂತೆ ಮೈಸೂರಿನ ಅರಸರು ಕ್ರೀಡೆಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಇದೇ ಪರಂಪರೆಯನ್ನು ಮುಂದುವರಿಸಿಕೊಂಡು ದಸರಾ ಕ್ರೀಡಾಕೂಟದ ವಿಜೇತ ಕ್ರೀಡಾಪಟುಗಳಿಗೆ ನೀಡುವ ನಗದು ಬಹುಮಾನವನ್ನು ಹೆಚ್ಚಿಸಲಾಗುವುದು ಎಂದು ಹೇಳಿದರು. ರಾಜ್ಯ ಸರ್ಕಾರ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಬೆಂಬಲ ನೀಡುತ್ತಿದೆ. ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಚಿನ್ನದ ಪದಕ ವಿಜೇತರಿಗೆ ?1 ಕೋಟಿ, ಬೆಳ್ಳಿ ಪದಕ ವಿಜೇತರಿಗೆ ?75 ಲಕ್ಷ ಹಾಗೂ ಕಂಚಿನ ಪದಕ ವಿಜೇತರಿಗೆ ?50 ಲಕ್ಷ ನಗದು ಬಹುಮಾನ ಘೋಷಿಸಲಾಗಿದೆ. ಮುಂದಿನ ಎಲ್ಲ ನೇಮಕಾತಿಗಳಲ್ಲಿ ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲಾತಿಯಡಿ ಉದ್ಯೋಗ ಕಲ್ಪಿಸಲಾಗುವುದು ಎಂದು ತಿಳಿಸಿದರು. ಕ್ರೀಡಾಪಟುಗಳು ತಮ್ಮ ಭವಿಷ್ಯವನ್ನು ತ್ಯಾಗ ಮಾಡಿ ಪದಕ ಗೆಲ್ಲಲು ಹಾಗೂ ದೇಶಕ್ಕೆ ಗೌರವ ತರಲು ಶ್ರಮಿಸುತ್ತಾರೆ. ಅವರು ಮಾಡುವ ಸಾಧನೆಗೆ ಸರ್ಕಾರ ನೀಡುವ ಪ್ರೋತ್ಸಾಹದ ಹಣದಿಂದ ಬೆಲೆ ಕಟ್ಟಲು ಸಾಧ್ಯವಿಲ್ಲ. ಕ್ರೀಡೆಗೆ ಅನುಕೂಲವಾಗುವಂತೆ ಎಲ್ಲ ರೀತಿಯ ಮೂಲಸೌಕರ್ಯಗಳನ್ನು ಒದಗಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ಮೊದಲ ಪುಟದಿಂದ

ಡಿಕೆಶಿಯೇ 'ಸ್ಟಿಂಗ್ ಕಿಂಗ್‌ಪಿನ್'

ಸಿಎಂ ಬದಲಾವಣೆ ಆದ ಬಳಿಕ ಏಕೆ ಇದು ಶುರುವಾಗಿದೆ? ಗೌರವಯುತವಾಗಿ ಅಧಿಕಾರ ನಡೆಸಿದವರ ವಿರುದ್ಧ ಹೀಗೆ ಮಾಡುವುದೇ? ಇದೇನು ತಮಾಷೆಯ ವಿಷಯವೇ? ಪವರ್‌ಫುಲ್ ಸಿಐಡಿ ಅಧಿಕಾರಿಗಳಿದ್ದಾರೆ. ತನಿಖೆಗೆ ಕೊಡಿ. ಸ್ಟಿಂಗ್ ಆಪರೇಷನ್ ಮಾಡಿದವರು ಯಾರು ಎಂಬುದು ಸಿಎಂಗೆ ಗೊತ್ತು, ಸಚಿವರಿಗೆ ಗೊತ್ತಿಲ್ಲ ಅಲ್ಲವೇ? ಎಂದು ಪ್ರಶ್ನೆಗಳ ಮಳೆ ಸುರಿಸಿದರು.

ಕನ್ನಡದ ದೀಪ ಆರದಿರಲಿ

ಮಾನವೀಯತೆ ಮತ್ತು ಸತ್ಯದ ಹಾದಿ ಒಂದೇ ಆಗಿರಬೇಕು ಎಂದು ಪ್ರತಿಪಾದಿಸಿದರು.

ಚಾಮುಂಡೇಶ್ವರಿಗೆ ಅಗ್ರಪೂಜೆ

ದಿನವಾದ ಭಾನುವಾರ ದೇವಸ್ಥಾನದ ಒಳಗೆ ಪೂಜಾ ಕೈಂಕರ್ಯಗಳನ್ನು ಕೈಗೊಂಡು ವಿಶೇಷ ಅಲಂಕಾರದೊಂದಿಗೆ ದಸರಾ ಉದ್ಘಾಟನಾ ವೇದಿಕೆಗೆ ಕರೆತಂದು. ಅಲ್ಲಿ ಬೆಳ್ಳಿ ಪಲ್ಲಕ್ಕಿಯಲ್ಲಿ ಕೂರಿಸಿದ ಬಳಿಕ ನಾಡ ಅಧಿದೇವತೆಗೆ ಗಣ್ಯರಿಂದ ಪುಷ್ಪಾರ್ಚನೆ ಮಾಡಿ ದಸರಾ ಉದ್ಘಾಟಿಸಲಾಯಿತು.

ಚಾಮುಂಡೇಶ್ವರಿ ಅಮ್ಮನವರ ಉತ್ಸವಮೂರ್ತಿ ವರ್ಷವಿಡೀ ಅರಮನೆಯಲ್ಲಿ ಇರಲಿದೆ. ದಸರಾ ಸಂದರ್ಭದಲ್ಲಿ ಅರಮನೆಯಿಂದ ಚಾಮುಂಡಿ ಬೆಟ್ಟದ ಪ್ರಾಧಿಕಾರಕ್ಕೆ ಕಳಿಸಿಕೊಡಲಾಗುತ್ತದೆ. ಅಲ್ಲಿ ನವರಾತ್ರಿ ವಿಶೇಷ ಪೂಜೆ ನಂತರ ಜಂಬೂಸವಾರಿಯ ದಿನ ಅರಮನೆಗೆ ಕರೆತರಲಾಗುತ್ತದೆ. ಅಲ್ಲಿ ಪೂಜೆ ಸಲ್ಲಿಸಿದ ನಂತರ ಚಿನ್ನದ ಅಂಬಾರಿಯಲ್ಲಿ ಅಮ್ಮನವರನ್ನು ಕೂರಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ.

50ಕ್ಕೂ ಹೆಚ್ಚು ಮಠಾಧೀಶರು ಭಾಗಿ

ಬಿಂಬಿಸುವ ಕೆಲಸ ಮಾಡಲಾಗುತ್ತಿದೆ. ಇದಕ್ಕೆ ಯಾವುದೇ ಆಸ್ಪದ ನೀಡದೇ ನಾಡಿನ ಒಳಿತಿಗಾಗಿ ಎಲ್ಲರ ಪ್ರಾರ್ಥನೆ ಮಾಡೋಣ ಎಂದು ಹೇಳಿದರು.

ಗುಂಡ್ಲುಪೇಟೆ ಟೌನ್ ಘಟಕದ ಪದಾಧಿಕಾರಿಗಳ ಆಯ್ಕೆ

ಜಯ ಕರ್ನಾಟಕ ರಕ್ಷಣಾ ಸೇನೆಯ ಗುಂಡ್ಲುಪೇಟೆ ಘಟಕ ಉದ್ಘಾಟನೆ

ಗುಂಡ್ಲುಪೇಟೆ: ಕನ್ನಡ ನಾಡು, ನುಡಿ, ನೆಲ, ಜಲ ಹಾಗೂ ಸಂಸ್ಕೃತಿಯ ರಕ್ಷಣೆಯೊಂದಿಗೆ ಬಡವರು, ಶೋಷಿತರು ಮತ್ತು ರೈತರ ಪರವಾಗಿ ಹೋರಾಟ ನಡೆಸುವ ಉದ್ದೇಶದಿಂದ ಜಯ ಕರ್ನಾಟಕ ರಕ್ಷಣಾ ಸೇನೆಯ ಗುಂಡ್ಲುಪೇಟೆ ಟೌನ್ ಘಟಕವನ್ನು ಉದ್ಘಾಟಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಜ್ಯಾಧ್ಯಕ್ಷ ಕೆ.ಸಿ.ರಾಜಪ್ಪ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮವು ತಾಲೂಕು ಅಧ್ಯಕ್ಷ ಸೈಯದ್ ಅನ್ಸರ್ ಅವರ ಅಧ್ಯಕ್ಷತೆಯಲ್ಲಿ, ಜಿಲ್ಲಾ ಗೌರವಾಧ್ಯಕ್ಷ ಎಸ್. ಪುಟ್ಟಮ್ಮ ಹಾಗೂ ಜಿಲ್ಲಾಧ್ಯಕ್ಷ ಎಸ್.ಈಶ್ವರ್ ಅವರ ಸಮ್ಮುಖದಲ್ಲಿ ಜರುಗಿತು. ಸಂಘಟನೆಯ ಜನಪರ ಕಾಳಜಿ ಹಾಗೂ ಹೋರಾಟಗಳಿಂದ ಪ್ರೇರಿತರಾದ ಹಲವಾರು ಯುವ ಕರು ಈ ಸಂದರ್ಭದಲ್ಲಿ ಸಂಘಟನೆಗೆ ಸೇರ್ಪಡೆ ಗೊಂಡರು. ಸಮಾಜದಲ್ಲಿ ಶೋಷಣೆಗೆ ಒಳಗಾಗುವ ಜನರ ಧ್ವನಿಯಾಗಿ ನಿಲ್ಲುವುದು, ರೈತರ ಸಮಸ್ಯೆಗಳಿಗೆ ಸ್ಪಂದಿಸುವುದು ಹಾಗೂ ಕನ್ನಡ ನಾಡಿನ ನೆಲ, ಜಲ ಮತ್ತು ಭಾಷೆಯ ರಕ್ಷಣೆಗಾಗಿ ಹೋರಾಟ ರೂಪಿಸುವುದು ಸಂಘಟನೆಯ ಪ್ರಮುಖ ಉದ್ದೇಶವಾಗಿದೆ ಎಂದು ಪದಾಧಿಕಾರಿಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಜಾಫರ್, ಜಿಲ್ಲಾ ಮಹಿಳಾ ಉಪಾಧ್ಯಕ್ಷೆ ಸುಜಯ, ತಾಲೂಕು ಉಪಾಧ್ಯಕ್ಷ ಪ್ರಸಾದ್, ಹಂಗಳ ಹೋಬಳಿ ಕಾರ್ಯಾಧ್ಯಕ್ಷ ಗಣೇಶ್ ಕನ್ನೇಗಾಲ, ಮನಸ್ ಸೇರಿದಂತೆ ಸಂಘಟನೆಯ ವಿವಿಧ ಪದಾಧಿಕಾರಿಗಳು ಹಾಗೂ ಯುವ ಕಾರ್ಯಕರ್ತರು ಉಪಸ್ಥಿತರಿದ್ದರು.

ಟೌನ್ ಘಟಕದ ಪದಾಧಿಕಾರಿಗಳ ಆಯ್ಕೆ

ಗುಂಡ್ಲುಪೇಟೆ ಟೌನ್ ಅಧ್ಯಕ್ಷರಾಗಿ ಜಾಫರ್, ಉಪಾಧ್ಯಕ್ಷರಾಗಿ ಎಂ.ಡಿ. ಉಸ್ಮಾನ್ ಹಾಗೂ ಚಂದನ್, ಸಂಘಟನಾ ಕಾರ್ಯದರ್ಶಿಯಾಗಿ ಪ್ರೀತಂ ನಾಯಕ್, ಕಾರ್ಯಾಧ್ಯಕ್ಷರಾಗಿ ಸುಜೆಲ್ ಹಾಗೂ ಎಂ.ಡಿ. ಇಸ್ರಾರ್, ಕಾರ್ಯದರ್ಶಿಯಾಗಿ ವಿನಯ್ ಮತ್ತು ಸಂಚಾಲಕರಾಗಿ ಸೈಯದ್ ಲುಕ್ಮಾನ್ ಆಯ್ಕೆಯಾದರು.ಕಾರ್ಯಕಾರಿ ಸದಸ್ಯರಾಗಿ ವಿನಾಯಕ್, ಎಂ.ಡಿ. ನಿಯಾಸ್, ನೇಮತ್, ಮೊಹಮ್ಮದ್, ಕೈಫ್, ಸುಹೇಬ್, ಜಾಹಿದ್, ಆಫ್ನಾನ್, ನವಾಜ್, ಸಂತೋಷ್, ದೀಕ್ಷಿತ್, ಅಭಿ, ನಿಶಾರಕ್, ವಿನಿ ಬಸವ, ಹೇಮಂತ್, ಮನು ಹಾಗೂ ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು. ತಾಲೂಕು ಕಾರ್ಯಾಧ್ಯಕ್ಷರಾಗಿ ಅಜಿತ್ ಕುಮಾರ್ ಹಾಗೂ ತಾಲೂಕು ಸಂಘಟನಾ ಕಾರ್ಯದರ್ಶಿಯಾಗಿ ಗೋವಿಂದರಾಜು ಆಯ್ಕೆಯಾದರು.

ನಾಲ್ಕು ಶಕ್ತಿ ದೇವತೆಗಳ ಕರಗಗಳಿಗೆ ವಿಶೇಷ ಪೂಜೆ; ಒಂಬತ್ತು ದಿನಗಳ ಕಾಲ ನಗರ ಪ್ರದಕ್ಷಿಣೆ

ಮಡಿಕೇರಿ ದಸರಾಗೆ ಅದ್ಧೂರಿ ಚಾಲನೆ

ಮಡಿಕೇರಿ: ಇಲ್ಲಿನ ಮಹದೇವಪೇಟೆಯ ಪಂಪಿನ ಕೆರೆಯಲ್ಲಿ ಭಾನುವಾರ ನಗರದ ಶಕ್ತಿ ದೇವತೆಗಳ ಕರಗಗಳಿಗೆ ಪೂಜೆ ಸಲ್ಲಿಸುವ ಮೂಲಕ ಐತಿಹಾಸಿಕ ಮಡಿಕೇರಿ ದಸರಾಗೆ ಚಾಲನೆ ದೊರೆಯಿತು.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಪಿ.ಎಂ. ನರೇಂದ್ರ ಸ್ವಾಮಿ ಅವರು ನಾಲ್ಕು ಶಕ್ತಿ ದೇವತೆಗಳಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಮಡಿಕೇರಿ ದಸರಾಗೆ ಚಾಲನೆ ನೀಡಿದರು.

ನಾಲ್ಕು ಶಕ್ತಿ ದೇವತೆಗಳ ಕರಗಗಳ ಮೆರವಣಿಗೆ

ನಗರದ ಶಕ್ತಿ ದೇವತೆಗಳಾದ ಕುಂದೂರು ಮೊಟ್ಟೆ ಚೌಟಿ ಮಾರಿಯಮ್ಮ, ಕಂಚಿ ಕಾಮಾಕ್ಷಿಯಮ್ಮ, ದಂಡಿನ ಮಾರಿಯಮ್ಮ ಹಾಗೂ ಕೋಟೆ ಮಾರಿಯಮ್ಮ ದೇವಾಲಯಗಳ ಕರಗಗಳು ಪುಷ್ಪಾಲಂಕೃತಗೊಂಡು, ಭಕ್ತರ ಜಯಘೋಷ ದೊಂದಿಗೆ ಮೆರವಣಿಗೆ ಆರಂಭಿಸಿದವು. ಪೂಜೆ ಸಲ್ಲಿಸಿದ ಬಳಿಕ ನಾಲ್ಕು ದೇವತೆಗಳ ಕರಗಗಳು ನಗರ ಪ್ರದಕ್ಷಿಣೆಗೆ ಹೊರಟವು.

ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗುತ್ತಿದ್ದಂತೆ ಭಕ್ತರು ಕರಗಗಳಿಗೆ ಪೂಜೆ ಸಲ್ಲಿಸಿ ಭಕ್ತಿಭಾವ ಮೆರೆದರು. ಪೂಜೆಯ ಬಳಿಕ ಆರಂಭವಾದ ಕರಗಗಳ ನಗರ ಪ್ರದಕ್ಷಿಣೆ ಮುಂದಿನ ಒಂಬತ್ತು ದಿನಗಳ ಕಾಲ ಮುಂದುವರಿಯಲಿದೆ.

ಕರಗ ಹೊತ್ತ ದೇವಾಲಯಗಳ ಪ್ರತಿನಿಧಿಗಳು

ಕುಂದೂರು ಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯದ ಪರವಾಗಿ ಪಿ.ಪಿ. ಚಾಮಿ, ದಂಡಿನ ಮಾರಿಯಮ್ಮ ದೇವಾಲಯದ ಪರವಾಗಿ ಜಿಜೇಶ್, ಕೋಟೆ ಮಾರಿಯಮ್ಮ ದೇವಾಲಯದ ಪರವಾಗಿ ಪ್ರಜ್ವಲ್ ಹಾಗೂ ಕಂಚಿ ಕಾಮಾಕ್ಷಿಯಮ್ಮ ದೇವಾಲಯದ ಪರವಾಗಿ ಗಿರೀಶ್ ಅವರು ಕರಗ ಹೊತ್ತಿದ್ದರು.

ಕರಗ ಪೂಜೆಯ ಸಂದರ್ಭದಲ್ಲಿ ಶಾಸಕ ಡಾ. ಮಂತರ್ ಗೌಡ, ನಗರಸಭೆ ಅಧ್ಯಕ್ಷೆ ಪಿ. ಕಲಾವತಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಸುನಿಲ್ ಸುಬ್ರಮಣಿ ಮತ್ತು ವೀಣಾ ಅಚ್ಚಯ್ಯ, ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಎನ್. ಬಿಂದುಮಣಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಉಪ ಪೊಲೀಸ್ ವರಿಷ್ಠಾಧಿಕಾರಿ ಸೂರಜ್, ಪೌರಾಯುಕ್ತ ಎಚ್.ಆರ್. ರಮೇಶ್ ಉಪಸ್ಥಿತರಿದ್ದರು. ದಸರಾ ಸಮಿತಿಯ ಪ್ರಮುಖರಾದ ಅರುಣ್ ಕುಮಾರ್, ಮಹೇಶ್ ಜೈನಿ, ಅರುಣ್ ಶೆಟ್ಟಿ, ಸಬಿತಾ, ಪ್ರಕಾಶ್ ಆಚಾರ್ಯ, ಟಿ.ಪಿ. ರಮೇಶ್, ಅನಂತ ಶಯನ, ಜಿ. ಚಿದ್ವಿಲಾಸ್, ಅನಿಲ್ ಎಚ್.ಟಿ., ರಮೇಶ್, ಚುಮ್ಮಿ ದೇವಯ್ಯ, ಮೋಹನ್, ಕವನ್ ಹಾಗೂ ಮಡಿಕೇರಿ ದಸರಾ ಮತ್ತು ವಿವಿಧ ದೇವಾಲಯ ಸಮಿತಿಗಳ ಪ್ರಮುಖರು ಭಾಗವಹಿಸಿದ್ದರು.

ಸಾಮಾಜಿಕ ಅಸಮಾನತೆ ನಿವಾರಣೆಗೆ ಶಿಕ್ಷಣವೇ ಅಸ್ತ್ರ

ಎ.ನಾರಾಯಣಸ್ವಾಮಿ ಅಭಿಮತ । ಶೋಷಿತರು ಮಕ್ಕಳಿಗೆ ಶಿಕ್ಷಣ ಕೊಡಿಸಿ ಸಮಾಜದ ಮುಖ್ಯವಾಹಿನಿಗೆ ತನ್ನಿ

ಕೆ.ಆರ್. ಪೇಟೆ: ಸಾಮಾಜಿಕ ಅಸಮಾನತೆಯನ್ನು ಹೊಡೆದೋಡಿಸಿ ಆರೋಗ್ಯವಂತ ಸಮಾಜವನ್ನು ನಿರ್ಮಿಸಲು ಶಿಕ್ಷಣದ ಜ್ಞಾನದ ಬೆಳಕಿನ ಶಕ್ತಿಯಿಂದ ಮಾತ್ರ ಸಾಧ್ಯ. ಆದ್ದರಿಂದ ಶೋಷಿತರು ಹಾಗೂ ತುಳಿತಕ್ಕೊಳಗಾದ ಜನರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ, ಸಮಾಜದ ಮುಖ್ಯವಾಹಿನಿಗೆ ಬಂದು ಸಾಧನೆ ಮಾಡುವಂತೆ ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕು ಎಂದು ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಹೇಳಿದರು.

ಪಟ್ಟಣದ ರಾಮದಾಸ್ ಹೋಟೆಲ್ನ ಸುಲೋಚನಮ್ಮ ಸಭಾಂಗಣದಲ್ಲಿ ತೇಗನಹಳ್ಳಿಯ ಆದಿ ಜಾಂಬವ ಯುವ ಕ್ಷೇಮಾಭಿವೃದ್ಧಿ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಚೆಲುವಯ್ಯ ಅವರ ಬೀಳ್ಕೊಡುಗೆ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಶೋಷಿತರಿಗೆ ಮೀಸಲಾತಿ ಅಗತ್ಯ

ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷಗಳು ಕಳೆದಿದ್ದರೂ ಮೇಲು-ಕೀಳು, ಬಡವ-ಬಲ್ಲಿದ ಎಂಬ ಭೇದಭಾವವನ್ನು ಇಂದಿಗೂ ಸಂಪೂರ್ಣವಾಗಿ ಅಳಿಸಲು ಸಾಧ್ಯವಾಗಿಲ್ಲ. ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಆಕಾಶ-ಭೂಮಿಯಷ್ಟಿದೆ. ಶೋಷಿತರು ಹಾಗೂ ತುಳಿತಕ್ಕೊಳಗಾದ ಜನರಿಗೆ ಸಂವಿಧಾನದ ಆಶಯಗಳ ಫಲ ಇಂದಿಗೂ ಸಿಕ್ಕಿಲ್ಲ. ಆದ್ದರಿಂದ ಶೋಷಿತ ವರ್ಗದ ಜನರಿಗೆ ಮೀಸಲಾತಿ ಅವಶ್ಯಕವಾಗಿದೆ ಎಂದು ಹೇಳಿದರು.

ಬಡವರು ಹಾಗೂ ಶೋಷಿತರಿಗೆ ನ್ಯಾಯಬದ್ಧವಾಗಿ ದೊರೆಯಬೇಕಾದ ಮೀಸಲಾತಿಯನ್ನು ವಿರೋಧಿಸುವವರು ಅಕ್ಷರಸ್ಥರಾದರೂ ಸಂವಿಧಾನ ವಿರೋಧಿಗಳಾಗಿದ್ದಾರೆ. ಪರಿಶಿಷ್ಟ ಜಾತಿಗಳಿಗೆ ಸಿಗಬೇಕಾದ ಒಳಮೀಸಲಾತಿ ಹೋರಾಟದಲ್ಲಿ ಎಡಗೈ ಜನಾಂಗಕ್ಕೆ ಸೇರಿದ ಮಾದಿಗರಿಗೆ ದೊರೆಯಬೇಕಾದ ನ್ಯಾಯಬದ್ಧ ಮೀಸಲಾತಿ ಇನ್ನೂ ಸಿಕ್ಕಿಲ್ಲ. ಮಾದಿಗ ಸಮಾಜಕ್ಕೆ ಒಳಮೀಸಲಾತಿ ಇಂದಿಗೂ ಕನಸಿನ ಗಂಟಾಗಿಯೇ ಉಳಿದಿದೆ. ನಾಗರಿಕ ಸಮಾಜದಲ್ಲಿ ಮಾದಿಗ ಸಮುದಾಯದ ಬಂಧುಗಳು ಇಂದಿಗೂ

ಶೋಷಣೆಗೊಳಗಾಗಿ, ಸಂಘರ್ಷದ ನಡುವೆಯೇ ಜೀವನ ನಡೆಸುತ್ತಿದ್ದಾರೆ ಎಂದು ಎ. ನಾರಾಯಣಸ್ವಾಮಿ ವಿಷಾದ ವ್ಯಕ್ತಪಡಿಸಿದರು.

ಮಕ್ಕಳಿಗೆ ಸಮಾನ ಶಿಕ್ಷಣ ಕೊಡಿಸಿ: ಡಾ. ನಾರಾಯಣಗೌಡ

ರಾಜ್ಯದ ಮಾಜಿ ಸಚಿವ ಡಾ. ನಾರಾಯಣಗೌಡ ಅವರು ಡಾ. ಬಾಬು ಜಗಜೀವನ್ ರಾಮ್ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ಬಳಿಕ ಮಾತನಾಡಿದ ಅವರು, ಯುವಜನರು ಶಿಕ್ಷಣದ ಜ್ಞಾನದ ಬೆಳಕಿನ ಶಕ್ತಿಯ ಮೂಲಕ ಸಂಘಟಿತರಾಗಿ ಸಾಮಾಜಿಕ ಅಸಮಾನತೆಗಳ ವಿರುದ್ಧ ಹೋರಾಟ ನಡೆಸಬೇಕು. ಗ್ರಾಮೀಣ ಪ್ರದೇಶದ ಶೋಷಿತ ಸಮಾಜದ ಜನರು ತಮ್ಮ ಮಕ್ಕಳನ್ನು ಕೂಲಿ ಕೆಲಸಕ್ಕೆ ಹಚ್ಚದೆ ಕಡ್ಡಾಯವಾಗಿ ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಬೇಕು. ಮಕ್ಕಳನ್ನೇ ಸಮಾಜಕ್ಕೆ ಆಸ್ತಿಯನ್ನಾಗಿ ಕೊಡುಗೆಯಾಗಿ ನೀಡಬೇಕು ಎಂದು ಹೇಳಿದರು.

ಇಂದಿನ ಮಕ್ಕಳೇ ನಾಳಿನ ಭವ್ಯ ಭಾರತದ ಸತ್ಪ್ರಜೆಗಳು. ಆದ್ದರಿಂದ ಹೆಣ್ಣು-ಗಂಡು ಎಂಬ ಭೇದಭಾವ ಮಾಡದೆ ಎಲ್ಲ ಮಕ್ಕಳನ್ನೂ ಸಮಾನವಾಗಿ ಕಂಡು, ಶಿಕ್ಷಣದ ಮೂಲಕ ಸಾಧನೆ ಮಾಡುವಂತೆ ಪ್ರೋತ್ಸಾಹಿಸಬೇಕು. ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಡಾ. ಬಾಬು ಜಗಜೀವನ್ ರಾಮ್ ಅವರು ಶೋಷಿತರು ಹಾಗೂ ತುಳಿತಕ್ಕೊಳಗಾದ ಜನರಿಗೆ ಎರಡು ಕಣ್ಣುಗಳಿದ್ದಂತೆ. ಅವರು ನಾಗರಿಕ ಸಮಾಜದಲ್ಲಿ ಆತ್ಮಸ್ಥೈರ್ಯದಿಂದ ಜೀವನ ನಡೆಸುವ ಹಕ್ಕನ್ನು ನೀಡಿದ್ದಾರೆ. ಸಂವಿಧಾನಬದ್ಧವಾಗಿ ಸಿಗಬೇಕಾದ ಹಕ್ಕುಗಳು ಹಾಗೂ ಸವಲತ್ತುಗಳನ್ನು ಪಡೆದುಕೊಂಡು ಸ್ವಾಭಿಮಾನದಿಂದ ಬದುಕಬೇಕು ಎಂದು ತಿಳಿಸಿದರು.

ಅನ್ಯಾಯ ಮತ್ತು ಅಕ್ರಮಗಳ ವಿರುದ್ಧ ಸಂಘಟಿತ ಹೋರಾಟ ನಡೆಸಿ, ಜಾತಿ, ಮತ, ಪಂಥಗಳಿಂದ ಮುಕ್ತವಾದ ಆರೋಗ್ಯವಂತ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಬೇಕು ಎಂದು ಕರೆ ನೀಡಿದರು.

ಆದಿ ಜಾಂಬವ ಟ್ರಸ್ಟ್‌ನ ಕಾರ್ಯಕ್ಕೆ ಮೆಚ್ಚುಗೆ

ಕೃಷ್ಣರಾಜಪೇಟೆ ತಾಲೂಕಿನ ತೇಗನಹಳ್ಳಿ ಗ್ರಾಮದ ಅವಿದ್ಯಾವಂತ ಯುವಜನರು ಕೂಲಿ ಕೆಲಸ ಮಾಡಿ ಸಂಪಾದಿಸಿದ ಹಣದಲ್ಲಿ ಆದಿ ಜಾಂಬವ ಯುವ ಕ್ಷೇಮಾಭಿವೃದ್ಧಿ ಸೇವಾ ಟ್ರಸ್ಟ್ ಸ್ಥಾಪಿಸಿ, ಅಕ್ಷರಸ್ಥರು ನಾಚುವಂತೆ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಪ್ರತಿ ವರ್ಷ ಸಮಾಜದ ನೂರಾರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವುದರ ಜೊತೆಗೆ, ಗ್ರಾಮದಲ್ಲಿ ಸಮಾಜದ ಜನರಿಗೆ ಯಾವುದೇ ತೊಂದರೆ ಎದುರಾದರೂ ಟ್ರಸ್ಟ್ ಮೂಲಕ ತಮ್ಮ ಕೈಲಾದ ಸಹಾಯ ಮಾಡುತ್ತಿದ್ದಾರೆ. ಭಗವಂತನೇ ಮೆಚ್ಚುವಂತಹ ಕೆಲಸ ಮಾಡುವ ಮೂಲಕ ನಾಗರಿಕ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದು ಅಭಿಮಾನದಿಂದ ಹೇಳಿದರು.

ಅಪೂರ್ಣ ಭವನಗಳ ಕಾಮಗಾರಿ ಪೂರ್ಣಗೊಳಿಸಿ

ಕೆ.ಆರ್. ಪೇಟೆ ಪಟ್ಟಣದಲ್ಲಿ ಅಪೂರ್ಣವಾಗಿ ನಿಂತಿರುವ ಬಾಬು ಜಗಜೀವನ್ ರಾಮ್ ಭವನ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಸಮುದಾಯ ಭವನಗಳ ಕಾಮಗಾರಿಯನ್ನು ಪೂರ್ಣಗೊಳಿಸಲು ಶಾಸಕರು ಮುಂದಾಗಬೇಕು. ಭವನಗಳ ನಿರ್ಮಾಣ ಪೂರ್ಣಗೊಳಿಸಲು ಅಗತ್ಯವಾದ ಅನುದಾನವನ್ನು ಸರ್ಕಾರದಿಂದ ದೊರಕಿಸಿಕೊಡಲು ತಾವು ಬದ್ಧರಾಗಿರುವುದಾಗಿ ಡಾ. ನಾರಾಯಣಗೌಡ ಘೋಷಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಟಿ. ಮಂಜು, ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಕರ್ನಾಟಕ ರಾಜ್ಯ ಕೈಗಾರಿಕ ಮಾರಾಟ ಸರಬರಾಜು ಮಹಾಮಂಡಲದ ಅಧ್ಯಕ್ಷ ಬಸ್ ಸಂತೋಷ್ ಕುಮಾರ್, ಮಂಡ್ಯ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ, ರಾಜ್ಯ ಆರ್ಟಿಒ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ, ಸಮಾಜ ಸೇವಕರಾದ ಬೆಂಗಳೂರಿನ ಕೆ.ಆರ್. ರಮೇಶ್, ಪದವಿಪೂರ್ವ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಚೆಲುವಯ್ಯ, ಸಿ.ಆರ್.ಪಿ.ಎಫ್. ಸಂಸ್ಥಾಪಕ ಅಧ್ಯಕ್ಷ ಹಾಗೂ ಸಂಪನ್ಮೂಲ ವ್ಯಕ್ತಿ ಅರಕಲವಾಡಿ ನಾಗೇಂದ್ರ, ಕೆ.ಆರ್. ಪೇಟೆ ಸರ್ಕಾರಿ ಪದವಿ ಕಾಲೇಜಿನ ಉಪನ್ಯಾಸಕ ಎಂ.ಎಲ್. ವೆಂಕಟೇಶ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕುಮಾರ್ ಮಾತನಾಡಿದರು.

ಸಮಾಜ ಸೇವಕ ನಂಜುಂಡಸ್ವಾಮಿ, ಮುಖಂಡ ಪೂಜಾರಿ ಯಾಲಕಪ್ಪ, ಪ್ರಥಮ ದರ್ಜೆ ಗುತ್ತಿಗೆದಾರ ಕುಮಾರ್, ಮುಖಂಡರಾದ ಹೊಸಹೊಳಲು ಪುಟ್ಟರಾಜು, ರಾಯಸಮುದ್ರ ಉಮೇಶ್, ಬಳ್ಳೇಕೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾಗರಾಜು, ಪುರಸಭೆ ಮುಖ್ಯಾಧಿಕಾರಿ ಅಶೋಕ್, ಸಿಂದಘಟ್ಟ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ವೆಂಕಟರಾಮು, ಕರಗುಂದ ರಮೇಶ್, ಬೆಟ್ಟಪ್ಪ, ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಹೆಚ್.ಪಿ. ಸ್ವಾಮಿ, ಹರಿಹರಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ರಾಜಮ್ಮ, ಬಳ್ಳೇಕೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸುಧಾಕರ್, ಆಟೋ ಸ್ವಾಮಿ, ಹರಿಹರಪುರ ಪ್ರಸನ್ನ, ತೇಗನಹಳ್ಳಿ ಹರೀಶ್ ಹಾಗೂ ಆದಿ ಜಾಂಬವ ಯುವ ಕ್ಷೇಮಾಭಿವೃದ್ಧಿ ಸೇವಾ ಟ್ರಸ್ಟ್ ಅಧ್ಯಕ್ಷ ಟಿ.ಸಿ. ರಘು ಮತ್ತಿತರರು ಉಪಸ್ಥಿತರಿದ್ದರು.

ವಿಶ್ರಾಂತ ಶಿಕ್ಷಕ ಹೊಸಹೊಳಲು ಶಿವಣ್ಣ ಸ್ವಾಗತಿಸಿದರು. ಉಪನ್ಯಾಸಕ ಮೂಡನಹಳ್ಳಿ ವೆಂಕಟೇಶ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಹೊಸಹೊಳಲು ನಂಜುಂಡಸ್ವಾಮಿ ಅವರು ಕ್ರಾಂತಿಗೀತೆಗಳು ಹಾಗೂ ಅಂಬೇಡ್ಕರ್ ಗೀತೆಗಳನ್ನು ಹಾಡುವ ಮೂಲಕ ಕಾರ್ಯಕ್ರಮದ ಸಂಭ್ರಮ ಹೆಚ್ಚಿಸಿದರು. ವಿದ್ಯಾರ್ಥಿಗಳು ನೀಡಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಅತಿಥಿಗಳು ಹಾಗೂ ಪ್ರೇಕ್ಷಕರನ್ನು ರಂಜಿಸಿದವು.

ದೆಹಲಿ ಹೋರಾಟಕ್ಕೆ ವಿವಿಧ ಸಂಘಟನೆಗಳ ಬೆಂಬಲ

ಎಚ್.ಡಿ. ಕೋಟೆ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯನ್ನು ವಿರೋಧಿಸಿ ದೆಹಲಿಯ ಜಂತರ್ ಮಂತರ್ನಲ್ಲಿ ಅಕ್ಟೋಬರ್ 10ರಂದು ನಡೆಯಲಿರುವ ಹೋರಾಟಕ್ಕೆ ಬೆಂಬಲ ಸೂಚಿಸಿ, ಸಂವಿಧಾನ ಸಂರಕ್ಷಣಾ ಸಮಿತಿ, ನಾಗರಿಕ ಮತ ಕಾವಲು ಸಮಿತಿ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ವತಿಯಿಂದ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದ ಆವರಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಎಸ್ಐಆರ್ ಪ್ರಕ್ರಿಯೆಯ ಹೆಸರಿನಲ್ಲಿ ದೇಶದ ಮೂಲನಿವಾಸಿಗಳು ಹಾಗೂ ಹಿಂದುಳಿದ ಸಮುದಾಯಗಳ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗುತ್ತಿದೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ಕೇಂದ್ರ ಚುನಾವಣಾ ಆಯೋಗದ ಏಕಪಕ್ಷೀಯ ನಿರ್ಧಾರಗಳನ್ನು ಖಂಡಿಸಿದರು.

ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರನ್ನು ವಜಾಗೊಳಿಸಬೇಕು ಹಾಗೂ

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಘೋಷಣೆಗಳನ್ನು ಕೂಗಿದರು.

ದೆಹಲಿಯಲ್ಲಿ ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ಹಾಗೂ ವಿವಿಧ ಸಂಘಟನೆಗಳ ವತಿಯಿಂದ ನಡೆಯುತ್ತಿರುವ ಹೋರಾಟವನ್ನು ಹತ್ತಿಕ್ಕಲು ದೆಹಲಿ ಪೊಲೀಸರ ಮೂಲಕ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿ, ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿದರು.

ಪ್ರಜಾಪ್ರಭುತ್ವದ ಪ್ರಮುಖ ಆಶಯಗಳಲ್ಲಿ ಒಂದಾದ ಪ್ರತಿಭಟಿಸುವ ಮತ್ತು ಹೋರಾಟ ನಡೆಸುವ ಹಕ್ಕನ್ನು ಹತ್ತಿಕ್ಕುವ ಯಾವುದೇ ಪ್ರಯತ್ನವನ್ನು ಕರ್ನಾಟಕ ಸಹಿಸುವುದಿಲ್ಲ ಎಂದು ಸಂವಿಧಾನ ಸಂರಕ್ಷಣಾ ಸಮಿತಿ, ನಾಗರಿಕ ಮತ ಕಾವಲು ಸಮಿತಿ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಎಚ್ಚರಿಕೆ ನೀಡಿದರು. ದೆಹಲಿಯ ಜಂತರ್ ಮಂತರ್ನಲ್ಲಿ ನಡೆಯುತ್ತಿರುವ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ ಎಂದು ಘೋಷಿಸಿದರು.

ಪ್ರತಿಭಟನೆಯಲ್ಲಿ ಸಂವಿಧಾನ ಸಂರಕ್ಷಣಾ ಪಡೆಯ ವಲಯ ಸಂಯೋಜಕ ಉಮೇಶ್ ಬಿ. ನೂರಲಕುಪ್ಪೆ, ಜಿಲ್ಲಾ ಸಂಚಾಲಕ ಬಸವರಾಜ್, ಪ್ರಗತಿಪರ ಮುಖಂಡ ಅಕ್ಬರ್ ಪಾಷ, ವೆಂಕಟಸ್ವಾಮಿ, ಯುವ ಮುಖಂಡ ಎಚ್.ಸಿ. ನರಸಿಂಹಮೂರ್ತಿ, ಪ್ರಗತಿಪರ ರೈತ ಮಲಾರ ಪುಟ್ಟಯ್ಯ, ದಸಂಸ ಮುಖಂಡ ಚಾ. ನಂಜುಂಡಮೂರ್ತಿ, ಸೋಗಳ್ಳಿ ಶಿವಣ್ಣ, ಸರಗೂರು ಶಿವಣ್ಣ, ಚನ್ನಿಪುರ ಮಲ್ಲೇಶ್, ದಸಂಸ ನಿಂಗರಾಜ್, ಕಾಡುಮನೆ ಪ್ರಸನ್ನ, ರಾಜೇಶ್, ನಂಜಪ್ಪ, ವಕೀಲ ಸೋಮ್ ಶೇಖರ್, ಉಮೇಶ್, ಹೆಬ್ಬಲಗುಪ್ಪೆ ರವಿ, ದಾಸಪ್ಪ, ಮಟಕೆರೆ ಶಿವರಾಜ್, ಸುರೇಶ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಮನವಿಗೆ ಸ್ಪಂದನೆ

'ರಾಷ್ಟ್ರೀಯ ಅರಿಶಿನ ಮಂಡಳಿ' ವ್ಯಾಪ್ತಿಗೆ ಸೇರ್ಪಡೆ

ಚಾಮರಾಜನಗರ, ಳೆದ ವರ್ಷ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾದ ಪಿಯುಷ್ ಗೋಯಲ್ ಅವರನ್ನು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಭೇಟಿ ಮಾಡಿ ಚಾಮ ರಾಜನಗರ ಜಿಲ್ಲೆಯನ್ನು 'ರಾಷ್ಟ್ರೀಯ ಅರಿಶಿನ ಮಂಡಳಿ'ಯ ವ್ಯಾಪ್ತಿಗೆ ಸೇರಿಸುವಂತೆ ಮನವಿಗೆ ಸ್ಪಂದನೆ ದೊರೆತಿದೆ.

ಅದರಂತೆ 2025-26ನೇ ಸಾಲಿನಲ್ಲಿ ಕೇಂದ್ರ ಅರಿಶಿನ ಮಂಡಳಿಯ ಕಾರ್ಯಕ್ರಮ ಗಳನ್ನು ಚಾಮರಾಜನಗರ ಜಿಲ್ಲೆಗೆ ವಿಸ್ತರಿಸ ಲಾಗಿದ್ದು, 5 ಟರ್ಮರಿಕ್ ಬಾಯ್ಲರ್ ಘಟಕಗಳು, 4 ಪಾಲಿಷರ್ಗಳು ಹಾಗೂ 94 ಹೈಜಿನಿಕ್ ಡ್ರೈಯಿಂಗ್ ಸೌಲಭ್ಯ ಗಳನ್ನು ಮಂಜೂರು ಮಾಡಲಾಗಿದೆ. ಈ ಸೌಲಭ್ಯದ ಮೂಲಕ ಜಿಲ್ಲೆಯ 800ಕ್ಕೂ ಅಧಿಕ ರೈತರಿಗೆ ನೆರವು ಕಲ್ಪಿಸಲಾಗಿದೆ. ಕ್ಷೇತ್ರದ ಜನತೆಯ ಪರವಾಗಿ ನಮ್ಮ ಈ ಹೆಜ್ಜೆ ಧನಾತ್ಮಕವಾಗಿದ್ದು, ರೈತರ ಮೂಲಭೂತ ಹಾಗೂ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಾವು ಯಶಸ್ಸಿನತ್ತ ಹೆಜ್ಜೆ ಇಡುತ್ತಿದ್ದೇವೆ. ಇದಕ್ಕೆ ಅವಕಾಶ ಮಾಡಿಕೊಟ್ಟ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಿದ ಕೇಂದ್ರ ಸಚಿವರಿಗೆ ಕ್ಷೇತ್ರದ ಜನತೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುವುದಾಗಿ ತಿಳಿಸಿದ್ದಾರೆ.

ದಸರೆಯ ಸಂಭ್ರಮ ಹೆಚ್ಚಿಸಿದ ದೀಪಾಲಂಕಾರಕ್ಕೆ ಚಾಲನೆ

ಮೈಸೂರು: ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಿರುವ ವಿದ್ಯುತ್ ದೀಪಾಲಂಕಾರಕ್ಕೆ ಇಂಧನ ಸಚಿವ ಕೆ.ಜೆ. ಜಾರ್ಜ್ ಭಾನುವಾರ ಚಾಲನೆ ನೀಡಿದರು.

ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಹಸಿರು ಚಪ್ಪರದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಇಂಧನ ಸಚಿವರಾದ ಕೆ.ಜೆ. ಜಾರ್ಜ್ ಅವರು ದಸರಾ ವಿದ್ಯುತ್ ದೀಪಾಲಂಕಾರಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್) ದ ವತಿಯಿಂದ ದಸರಾ ದೀಪಾಲಂಕಾರ ಮಾಡಲಾಗಿದ್ದು, ಕಳೆದ ವರ್ಷಕ್ಕಿಂತಲೂ ಹೆಚ್ಚು ಆಕರ್ಷಣೀಯವಾಗಿ ಈ ಬಾರಿಯ ದೀಪಾಲಂಕಾರ ಕಂಗೊಳಿಸಲಿದೆ. ಈ ಬಾರಿಯ ಬೆಳಕಿನ ವೈಭವ ಮತ್ತಷ್ಟು ವಿಸ್ತಾರಗೊಳ್ಳಲಿದ್ದು, ದೇಶ-ವಿದೇಶಗಳಿಂದ ಆಗಮಿಸುವ ಪ್ರವಾಸಿಗರನ್ನು 21 ದಿನಗಳ ಕಾಲ ದೀಪಾಲಂಕಾರದ ಮೂಲಕ ಸೆಳೆಯಲು ಸಿದ್ಧತೆ ಭರದಿಂದ ಸಾಗಿದೆ.

ವಿವಿಧ ಕಲಾಕೃತಿಗಳ ವೈಭವ:

ಆಕರ್ಷಕ ಡ್ರೋನ್ ಶೋ

ದಸರಾ ಮಹೋತ್ಸವದ ಬಹುಮುಖ್ಯ ಆಕರ್ಷಣೆಯಾದ ಡ್ರೋನ್ ಪ್ರದರ್ಶನ ಈ ಬಾರಿ ಮತ್ತಷ್ಟು ಹೊಸತನ ಹಾಗೂ ವಿಶೇಷತೆಯಿಂದ ಕೂಡಿರಲಿದೆ. 2024ರಲ್ಲಿ 1500 ಡ್ರೋನ್ ಬಳಸಿಕೊಂಡು ಡ್ರೋನ್ ಪ್ರದರ್ಶನ ನಡೆದಿತ್ತು. ನಂತರ 2025ರಲ್ಲಿ 3000 ಡ್ರೋನ್ ಬಳಸಿಕೊಂಡು ಅತ್ಯಾಕರ್ಷಕ ಡ್ರೋನ್ ಪ್ರದರ್ಶನದ ಜೊತೆಗೆ ರಾಷ್ಟ್ರೀಯ ಪ್ರಾಣಿ ಹುಲಿಯ ಚಿತ್ರವನ್ನು ರಚಿಸುವ ಮೂಲಕ ಗಿನ್ನಿಸ್ ದಾಖಲೆ ನಿರ್ಮಿಸುವಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ದೊಡಮಟ್ಟದ ಯಶಸ್ಸು ಕಂಡಿತ್ತು. ಈ ಬಾರಿ 3500 ಡ್ರೋನ್ ಬಳಸಿಕೊಂಡು, ಪ್ರದರ್ಶನ ನಡೆಸಲಾಗುತ್ತಿದೆ. ನಗರದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಅ17, 18, 20. ಮತ್ತು 21ರಂದು ಡ್ರೋನ್ ಪ್ರದರ್ಶನ ನಡೆಯಲಿದೆ.

146 ಕಿ.ಮೀ. ದೀಪಾಲಂಕಾರ

ಈ ಬಾರಿ 123 ವೃತ್ತಗಳು, 146 ಕಿ.ಮೀ. ರಸ್ತೆಗಳು, 80 ಪ್ರತಿಕೃತಿಗಳು, ಸ್ವಾಗತ ಕಮಾನುಗಳು, ಬಹುವರ್ಣದ ದೀಪಗಳಿಂದ ಮತ್ತಷ್ಟು ಅದ್ದೂರಿಯಾಗಲಿದೆ. ಸಂಜೆ 6 ಗಂಟೆಯಾಗುತ್ತಿದ್ದಂತೆ ನಗರದ ರಸ್ತೆಗಳು ಒಂದೊಂದಾಗಿ ಬೆಳಗಲಾರಂಭಿಸಿ, ರಾತ್ರಿ 11ರವರೆಗೆ ಮೈಸೂರನ್ನು ಮತ್ತೊಂದು ಲೋಕವನ್ನೇ ಹೋಲುವಂತೆ ಮಾಡಲಿವೆ. ಮೈಸೂರು ನಗರ ಹಾಗೂ ಹೊರವಲಯದ

ಗಾಳಿಯಲ್ಲಿ ಗುಂಡು ಹಾರಿಸುವುದು ನಿಲ್ಲಿಸಿ

ಹನಿ ಟ್ರ್ಯಾಪ್ ಬಗ್ಗೆ ಸಿಎಂ ಠಾಣೆಗೆ ತೆರಳಿ ದೂರು ನೀಡಿ ಎಫ್‌ಐಆರ್ ದಾಖಲಿಸಲಿ: ಆರ್.ಅಶೋಕ್

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಮೇಲೆ ಹಾಗೂ ತಮ್ಮ ಸಂಪುಟದ ಐದಾರು ಸಚಿವರ ಮೇಲೆ 'ಹನಿ ಟ್ರ್ಯಾಪ್' ಪ್ರಯತ್ನ ನಡೆದಿದೆ ಎಂದು ಹೇಳುತ್ತಿದ್ದಾರೆ.

ತಮ್ಮ ಬಳಿ ದಾಖಲೆ, ಫೋಟೋಗಳು ಹಾಗೂ ಈ ಕೃತ್ಯದ ಹಿಂದೆ ಯಾರಿದ್ದಾರೆ ಎಂಬ ಮಾಹಿತಿ ಇದೆ ಎಂದು ಸ್ವತಃ ಮುಖ್ಯಮಂತ್ರಿಗಳೇ ಹೇಳಿರು ವಾಗ, ಈವರೆಗೆ ಎಫ್‌ಐಆರ್ ದಾಖಲಿಸದಿರುವುದೇಕೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಪ್ರಶ್ನಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಇದು ವೈಯಕ್ತಿಕ ವಿಚಾರವಲ್ಲ. ಇಡೀ ಸರ್ಕಾ ರದ ಗೌರವ, ಭದ್ರತೆ ಮತ್ತು ಕಾನೂನು ಸುವ್ಯವಸ್ಥೆಯ ಪ್ರಶ್ನೆಯಾಗಿದೆ. ಮುಖ್ಯಮಂತ್ರಿಗಳೇ ತಮ್ಮ ಮೇಲೆ ಹಾಗೂ ಸಚಿವರ ಮೇಲೆ ಹನಿ ಟ್ರ್ಯಾಪ್ ಪ್ರಯತ್ನ ನಡೆದಿದೆ ಎಂದು ಹೇಳುತ್ತಿದ್ದಾರೆ. ಹಾಗಾದರೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎಲ್ಲಿದೆ? ಮುಖ್ಯಮಂತ್ರಿಗಳೇ ಸುರಕ್ಷಿತವಾಗಿಲ್ಲ ಎಂದಾದರೆ ಸಾಮಾನ್ಯ ಜನರ ಗತಿ ಏನು ಎಂದು ಪ್ರಶ್ನಿಸಿದರು.

'ಸಾಕ್ಷ್ಯವಿದ್ದರೆ ದೂರು ನೀಡಿ, ಎಫ್‌ಐಆರ್ ದಾಖಲಿಸಿ'

ಮುಖ್ಯಮಂತ್ರಿಗಳು ತಮ್ಮ ಬಳಿ ದಾಖಲೆ ಮತ್ತು ಫೋಟೋಗಳಿವೆ, ಈ ಕೃತ್ಯ ಎಸಗಿದವರು ಯಾರೆಂ ಬುದು ಗೊತ್ತಿದೆ ಎಂದು ಹೇಳುತ್ತಾರೆ. ಹಾಗಾದರೆ ದೂರು ಏಕೆ ನೀಡಿಲ್ಲ? ಎಫ್‌ಐಆರ್ ಏಕೆ ದಾಖಲಿಸಿಲ್ಲ? ಆರೋಪಿಗಳು ಯಾರೆಂಬುದು ಗೊತ್ತಿದ್ದರೆ ಅವರ ವಿರುದ್ಧ ಕಾನೂನು ಕ್ರಮ ಏಕೆ ಕೈಗೊಂಡಿಲ್ಲ? ಗಾಳಿಯಲ್ಲಿ ಗುಂಡು ಹಾರಿಸುವುದಕ್ಕೆ ಬೇರೆ ಜಾಗವಿದೆ. ಮುಖ್ಯಮಂತ್ರಿಗಳು ಗಾಳಿಯಲ್ಲಿ ಗುಂಡು ಹಾರಿಸುವುದನ್ನು ನಿಲ್ಲಿಸಿ, ಸತ್ಯವನ್ನು ಜನರ ಮುಂದೆ ಇಡಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿಗಳು ಕೂಡಲೇ ಪೊಲೀಸ್ ಠಾಣೆಗೆ ತೆರಳಿ ಸ್ವತಃ ದೂರು ನೀಡಿ ಎಫ್‌ಐಆರ್ ದಾಖಲಿಸಬೇಕು. ಅವರೇ ತಮ್ಮ ಬಳಿ ಸಾಕ್ಷ್ಯವಿದೆ ಎಂದು ಹೇಳಿರುವುದರಿಂದ ದೂರು ನೀಡುವ ಜವಾಬ್ದಾರಿಯನ್ನೂ ಅವರೇ ವಹಿಸಿಕೊಳ್ಳಬೇಕು. ತನಿಖೆ ನಡೆಯಬೇಕು. ತಪ್ಪಿತಸ್ಥರು ಯಾರೇ ಇರಲಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ರಾಜ್ಯದ ಜನರಿಗೆ ಸರ್ಕಾರದ ಮೇಲೆ ನಂಬಿಕೆ ಮೂಡುತ್ತದೆ. ಈ ಪ್ರಕರಣ ವನ್ನು ವೈಯಕ್ತಿಕ ವಿಚಾರ ವಾಗಿ ನೋಡದೆ, ಇಡೀ ಸರ್ಕಾರದ ಗೌರವದ ಪ್ರಶ್ನೆಯಾಗಿ ಪರಿಗಣಿಸಬೇಕು ಎಂದು ಹೇಳಿದರು.

> **ಮುಖ್ಯಮಂತ್ರಿಗಳೇ ರಾಜ್ಯದ ಇಂಟೆಲಿಜೆನ್ಸ್ ವ್ಯವಸ್ಥೆಯ ಮುಖ್ಯಸ್ಥರಾಗಿದ್ದು, ತಮ್ಮ ಬಳಿ ಮಾಹಿತಿ ಮತ್ತು ಸಾಕ್ಷ್ಯಗಳಿವೆ ಎಂದು ಹೇಳಿಕೊಂಡು ಸುಮ್ಮನಿರುವುದು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಯಾರೋ ಐದು ಜನ ಸಚಿವರ ಮೇಲೆ ಹನಿ ಟ್ರ್ಯಾಪ್ ನಡೆದಿದೆ ಎಂದು ಹೇಳುತ್ತೀರಿ. ಯಾರು ಮಾಡಿದ್ದಾರೆ? ಕಾಂಗ್ರೆಸ್‌ನವರಾ? ಬಿಜೆಪಿಯವರಾ? ಜೆಡಿಎಸ್‌ನವರಾ? ಅಥವಾ ಬೇರೆ ಯಾರಾದರೂ ಇದ್ದಾರಾ? ಅದನ್ನು ಬಹಿರಂಗಪಡಿಸಿ. ಪಕ್ಷದ ಹೆಸರು ಹೇಳದೇ ಎಲ್ಲ ಪಕ್ಷಗಳ ಮೇಲೂ ಅನುಮಾನ ಮೂಡುವಂತೆ ಮಾಡುವುದು ಸರಿಯಲ್ಲ.**
>
> ▸▸ **ಆರ್. ಅಶೋಕ್** ವಿರೋಧ ಪಕ್ಷದ ನಾಯಕ

ಅಧಿಕೃತ ಸ್ಪಷ್ಟನೆಗೆ ಒತ್ತಾಯ

ಸರ್ಕಾರದ ಸಂಪುಟದಲ್ಲಿರುವ ಸಚಿವರೇ ಇಂತಹ ಆರೋ ಪಗಳ ನಡುವೆ ಸಿಲುಕಿಕೊಂಡಿ ದ್ದಾರೆ. ಉತ್ತಮ ಸಚಿವರೂ ಆರೋಪಗಳ ನೆರಳಿನಲ್ಲಿ ಸಿಲುಕುವ ಪರಿಸ್ಥಿತಿ ನಿರ್ಮಾ ಣವಾಗಿದೆ. ಆದ್ದರಿಂದ ಸರ್ಕಾರವೇ ಅಧಿಕೃತ ಪ್ರಕ ಟಣೆ ಹೊರಡಿಸಿ, ಏನಾ ಗಿದೆ, ಯಾರ ವಿರುದ್ಧ ಆರೋಪಗ ಳಿವೆ ಮತ್ತು ಈವರೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬು ದನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಕೆಲವು ಸಚಿವರ ವೈಯಕ್ತಿಕ ವಿಚಾರಗಳ ಬಗ್ಗೆಯೂ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಅಂತಹ ಮಾಹಿತಿ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದ್ದರೆ, ಸಂವಿಧಾನ ಮತ್ತು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕಿತ್ತು ಎಂದು ಹೇಳಿದರು.

'ಸಂವಿಧಾನ ಓದಿ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ'

'ನೀವು ಯಾವಾಗಲೂ ಜೇಬಿನಲ್ಲಿ ಸಂವಿಧಾನ ಇಟ್ಟುಕೊಂಡು ಓಡಾ ಡುತ್ತೀರಿ. ಆ ಸಂವಿಧಾನವನ್ನು ಒಮ್ಮೆ ತೆಗೆದು ಓದಿ. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದೀರಿ. ಮಾಹಿತಿ ಸಿಕ್ಕಾಗ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದು ನಿಮ್ಮ ಕರ್ತವ್ಯ. ಮಾಹಿತಿ ಇದ್ದರೂ ಕ್ರಮ ಕೈಗೊಳ್ಳದೆ ಅದನ್ನು ಮುಚ್ಚಿಡುವುದು ಏಕೆ?' ಎಂದು ಪ್ರಶ್ನಿಸಿದರು.

ಸಚಿವ ಸತೀಶ್ ಜಾರಕಿಹೊಳಿ ಅವರು 'ರಸಗುಲ್ಲಾ, ಧಾರವಾಡ ಪೇಡ, ದಾವಣಗೆರೆ ಬೆಣ್ಣೆ ದೋಸೆ' ತರುತ್ತಾರೆ ಎಂಬ ರೀತಿಯಲ್ಲಿ ನೀಡಿರುವ ಹೇಳಿಕೆಯೂ ಹಲವು ಅನುಮಾನಗಳಿಗೆ ಕಾರಣವಾ ಗಿದೆ. ಒಬ್ಬ ಸಂಪುಟ ಸಚಿವರೇ ಇಂತಹ ಮಾರ್ಮಿಕ ಹೇಳಿಕೆ ನೀಡಿರುವಾಗ ಸರ್ಕಾರವೇ ಸ್ಪಷ್ಟನೆ ನೀಡಬೇಕು. ಮುಖ್ಯಮಂತ್ರಿಗಳು ಹೇಳಿರುವುದು ಸತ್ಯವಾಗಿದ್ದರೆ ಎಫ್‌ಐಆರ್ ದಾಖಲಿಸಬೇಕು. ಸುಳ್ಳಾಗಿದ್ದರೆ ಮುಖ್ಯ ಮಂತ್ರಿಗಳೇ ಸ್ಪಷ್ಟಪಡಿಸಬೇಕು. ರಾಜ್ಯದ ಜನರನ್ನು ಗೊಂದಲದಲ್ಲಿಟ್ಟು ಸರ್ಕಾರ ನಡೆಸಲು ಸಾಧ್ಯವಿಲ್ಲ ಎಂದರು.

ಮಾನ-ಮರ್ಯಾದೆಯ ಪ್ರಶ್ನೆ'

ಇದು ಡಿ.ಕೆ. ಶಿವಕುಮಾರ್ ಅವರ ವೈಯಕ್ತಿಕ ವಿಚಾರವಲ್ಲ. ಬಾಲಕೃಷ್ಣ ಅವರ ವೈಯಕ್ತಿಕ ವಿಚಾರವೂ ಅಲ್ಲ. ಇದು ಇಡೀ ಸರ್ಕಾರದ ಮಾನ-ಮರ್ಯಾದೆಯ ಪ್ರಶ್ನೆಯಾಗಿದೆ. ಸರ್ಕಾರದ ಗೌರವ ಉಳಿಸಿಕೊಳ್ಳ ಬೇಕಾದರೆ ಸತ್ಯವನ್ನು ಬಹಿರಂಗಪಡಿಸಿ, ಎಫ್‌ಐಆರ್ ದಾಖಲಿಸಿ, ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದರು. 'ಮುಖ್ಯಮಂತ್ರಿಗಳೇ, ಗಾಳಿ ಯಲ್ಲಿ ಗುಂಡು ಹಾರಿಸುವುದನ್ನು ನಿಲ್ಲಿಸಿ. ನಿಮ್ಮ ಬಳಿ ಸಾಕ್ಷ್ಯವಿದೆ ಎಂದಿ ದ್ದೀರಿ, ಅದನ್ನು ಬಹಿರಂಗಪಡಿಸಿ. ಯಾರು ಮಾಡಿದ್ದಾರೆ ಎಂಬುದು ಗೊತ್ತಿದೆ ಎಂದಿದ್ದೀರಿ, ಅವರ ಹೆಸರನ್ನು ಹೇಳಿ. ದೂರು ನೀಡಿ, ಎಫ್‌ಐ ಆರ್ ದಾಖಲಿಸಿ, ತನಿಖೆ ನಡೆಸಿ. ಇಲ್ಲವಾದರೆ ಇಡೀ ವಿಚಾರವನ್ನು ರಾಜಕೀಯವಾಗಿ ಜನರ ಗಮನ ಬೇರೆಡೆ ಸೆಳೆಯಲು ಬಳಸಿಕೊಳ್ಳಲಾ ಗುತ್ತಿದೆ ಎಂಬ ಅನುಮಾನ ಮೂಡುವುದು ಸಹಜ' ಎಂದರು.

ಇಂದಿನಿಂದ ಮಕ್ಕಳಿಗಾಗಿ ದಸರಾ ಸೃಜನಶೀಲ ಶಿಬಿರ

ಮೈಸೂರು: ಮಕ್ಕಳಲ್ಲಿನ ಪ್ರತಿಭೆ ಹೊರತರುವ ಹಾಗೂ ಸೃಜನಶೀಲತೆ ಬೆಳೆಸುವ ಉದ್ದೇಶದಿಂದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಅ.12ರಿಂದ 18ರವರೆಗೆ ದಸರಾ ಮಕ್ಕಳ ಶಿಬಿರ – ಆಟ ಆಯೋಜಿಸಿದೆ.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಹಾರ್ಡ್ವೀಕ್ ಶಾಲೆಯ ಆವರಣದಲ್ಲಿ ಈ ಶಿಬಿರ ನಡೆಯಲಿದ್ದು, 8ರಿಂದ 15 ವರ್ಷದೊಳಗಿನ ಮಕ್ಕಳಿಗಾಗಿ ರೂಪಿಸಲಾಗಿದೆ. ಬೆಳಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ಜರುಗಲಿದೆ. ಶಿಬಿರದಲ್ಲಿ ಮಕ್ಕಳು ಪ್ರತ್ಯಕ್ಷವಾಗಿ ಮಣ್ಣು, ಪ್ರಕೃತಿ, ಬಣ್ಣಗಳು ಹಾಗೂ ವಿವಿಧ ವಸ್ತುಗಳೊಂದಿಗೆ ಬೆರೆತು ಕಲಿಯುವ ಅನನ್ಯ ಅವಕಾಶವನ್ನು ಪಡೆಯಲಿದ್ದಾರೆ.

ಈ ಶಿಬಿರದ ಪ್ರವೇಶ ಶುಲ್ಕ 3,000 ಆಗಿದೆ. ಸೀಮಿತ ಸಂಖ್ಯೆಯ ಸೀಟುಗಳು ಮಾತ್ರ ಲಭ್ಯವಿದ್ದು, ಆಸಕ್ತರು ನೋಂದಣಿಗಾಗಿ 96868 92255 ಸಂಖ್ಯೆ ಸಂಪರ್ಕಿಸಬಹುದು.

ಇಂದುಶ್ರೀ ರಾಷ್ಟ್ರ ಮಟ್ಟದ ಸ್ಪರ್ಧೆಗೆ

ರಾಮನಗರ: ರಾಜ್ಯ ಮಟ್ಟದ ಟೇಕ್ವಾಂಡೋ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನಗರದ ರಾಯರ ದೊಡ್ಡಿ ಸರ್ಕಾರಿ ಪ್ರಾಥಮಿಕ ಪಾಠ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಇಂದುಶ್ರೀ ಚಿನ್ನದ ಪದಕಗ ಳಿಸಿದ್ದು ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ನಡೆಯುವ 70ನೇ ರಾಷ್ಟ್ರ ಮಟ್ಟದ ಟೇಕ್ವಾಂಡೋ ಸ್ಪರ್ಧೆಯಲ್ಲಿ ಇಂದುಶ್ರೀ ಭಾಗವಹಿಸಲಿದ್ದು ಜಿಲ್ಲೆಯ ನಾಗರೀಕರು ಶುಭಕೋರಿದ್ದಾರೆ. ರಾಮನಗರದ ಶರತ್ ಶಾಲೆಯ ಎ.ಆರ್. ರಕ್ಷಕ್ ಗೌಡ, ಮಾಗಡಿಯ ಎಸ್.ಬಿ.ಎಸ್ ಶಾಲೆಯ ಧಾನ್ವಿ ಸುರೇಶ್ ಗೌಡ ಬೆಳ್ಳಿ ಪದಕಗಳನ್ನು ಗಳಿಸಿದ್ದಾರೆ. ಕಿಂಗ್‌ಸ್ಟನ್ ಶಾಲೆಯ ಸಾಗರ್ ಕಂಚಿನ ಪದಕ ಪಡೆದುಕೊಂಡಿದ್ದಾರೆ. ಇವರೆಲ್ಲ ರವಿಕುಮಾರ್ ಅವರ ಎ.ಆರ್.ಕೆ. ಕಲ್ಚರಲ್ ಆಂಡ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಅಭ್ಯಾಸ ಪಡೆದು ಕೊಳ್ಳುತ್ತಿದ್ದಾರೆ. ಪದಕ ಗೆದ್ದ ಎಲ್ಲಾ ವಿಜೇತರಿಗೆ ಬೆಂಗಳೂರು ದಕ್ಷಿಣ ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರಾದ ನೀಲಕಂಠಸ್ವಾಮಿ ರವರು, ಸರ್ಕಾರಿ ಶಾಲಾ ಶಿಕ್ಷಕರ ಸಂಘದ ಪಾದಾಧಿಕಾರಿಗಳು, ನಗರಸಭೆ ಸದಸ್ಯರಾದ ಬೈರೇಗೌಡ, ಎಆರ್‌ಕೆ ಕಲ್ಚರಲ್ ಅಕಾಡೆಮಿ ಗೌರವಾಧ್ಯಕ್ಷ ಪ್ರಕಾಶ್, ಪ್ರದಾನ ಕಾರ್ಯದರ್ಶಿ ಮಂಜುಳ ರವಿಕುಮಾರ್ ಮತ್ತು ಶಿಕ್ಷಕರ ವೃಂದದವರು ಕ್ರೀಡಾಪಟುಗಳಿಗೆ ಶುಭ ಕೋರಿದ್ದಾರೆ.

ಚಾಮರಾಜೇಶ್ವರಸ್ವಾಮಿಗೆ ವಿಶೇಷಪೂಜೆ



ಚಾಮರಾಜನಗರ: ಜಿಲ್ಲೆಯಲ್ಲಿ ಮೂರು ದಿನಗಳ ದಸರಾ ಆಚರಣೆ ಅಮನಗವಾಗಿ ಅಖಿಲ ಕನ್ನಡ ಮಹಾಸಭಾದ ವತಿಯಿಂದ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷಪೂಜೆ ಸಲ್ಲಿಸಿ ಸರ್ಕಾರಕ್ಕೆ ಅಭಿನಂದಿಸಲಾಯಿತು.

ಕಳೆದ ವರ್ಷ, ಈ ಬಾರಿ ಬರನೆಪವೊಡ್ಡಿ ರಾಜ್ಯ ಸರ್ಕಾರ ಚಾಮರಾಜನಗರ ದಸರಾ ಆಚರಣೆ ಕೈ ಬಿಟ್ಟಿತು. ಆಗಾಗಿ ಕಳೆದ ವರ್ಷದಂತೆ ಈ ಬಾರಿಯು ನಮ್ಮ ಸಂಘಟನೆ ವತಿಯಿಂದ 9 ದಿನಗಳ ಕಾಲ ದಸರಾ ಆಚ ರಣೆಗೆ ಮುಂದಾಗಿತು. ಕೊನೆಗಳಿಗೆಯಲ್ಲಿ ರಾಜ್ಯ ಸರ್ಕಾರ ಚಾಮರಾಜನಗರದಲ್ಲಿ ಮೂರು ದಿನಗಳ ಕಾಲ ದಸರಾ ಆಚರಣೆಗೆ ಅನುಮತಿ ನೀಡಿತು. ಆಗಾಗಿ ನಮ್ಮ ಸಂಘಟನೆ ವತಿಯಿಂದ ಮಾಡಲು ನಿರ್ಧರಿಸಿದ ದಸರಾ ಆಚರಣೆ ಕೈ ಬಿಟ್ಟು ಸರ್ಕಾರ ಆಚರಣೆಗೆ ಸಂಪೂರ್ಣ ಬೆಂಬಲ ಸಹಕಾರ ನೀಡಲಾಗುತ್ತದೆ ಎಂದರು.

ಚಾಮರಾಜನಗರ ದಲ್ಲಿ ಅದ್ದೂರಿ ದಸರಾ ಆಚರಣೆಗೆ ಕಾರಣರಾದ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅವರಿಗೆ ದಸರಾ ಆಚರಣೆ ಮಾಡುವಂತೆ ಹೋರಾಟ ಮಾಡಿದ ಕಲಾವಿದರುಗಳಿಗೆ, ಕನ್ನಡ ಪರ ಹೋರಾಟಗಾರಿಗೆ ಈ ಮೂಲಕ ಅಭಿ ನಂದನೆ ಸಲ್ಲಿಸಲಾಗುವುದು, ನಾಡಿನ ಅಧಿದೇವತೆ ಶ್ರೀಚಾಮುಂಡೇಶ್ವರಿ, ಶ್ರೀಚಾಮರಾಜೇಶ್ವರಸ್ವಾಮಿ ನಾಡಿನ ಸಮಸ್ತ ಜನತೆಗೆ ಒಳಿತು ಮಾಡಲಿ, ಉತ್ತಮ, ಮಳೆ ಬೆಳೆಯಾಗಲಿ ಎಂದು ಆಶಿಸಿದರು. ಈ ಸಂದ ರ್ಭದಲ್ಲಿ ಪಣ್ಯದಹುಂಡಿ ರಾಜು, ನಿಜಧ್ವನಿಗೋವಿಂ ದರಾಜು, ಮಂಗಲ ಹೊಸೂರು ಶಿವಣ್ಣ, ನಂಜುಂಡಶೆಟ್ಟಿ, ಮಹೇಶ್ ಗೌಡ, ಅರುಣಕುಮಾರ್ ಗೌಡ, ತಮಿಳು ಸಂಘ ರಾ.ಜಗದೀಶ್, ರವಿಚಂದ್ರಪ್ರ ಸಾದ್ ಕಹಳೆ, ಟೌನ್ ಒಕ್ಕಲಿಗ ಸಂಘದ ಅಧ್ಯಕ್ಷ ಮಹೇಶ್ ಗೌಡ, ವೀರಭದ್ರ ಇತರರು ಭಾಗವಹಿಸಿದ್ದರು.

ದೇವರ ಮುಂದೆ ಪ್ರಮಾಣ ಮಾಡಿ

ಆರೋಪ ಸಾಬೀತು ಮಾಡಿ ಮಾಜಿ ಶಾಸಕ ಎ.ಮಂಜುಗೆ ಕೆ.ರಾಜು ಸವಾಲು

ರಾಮನಗರ: ತಮ್ಮ ವಿರುದ್ಧ ಮಾಜಿ ಶಾಸಕ ಎ.ಮಂಜುನಾಥ್ ಮಾಡಿರುವ ಆರೋಪಗಳನ್ನು ಅವರು ಸಾಭೀತು ಮಾಡಬೇಕು, ಇಲ್ಲವೇ ಮುಂದಿನ ಶುಕ್ರವಾರ ರಾಮನಗರದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯಕ್ಕೆ ಬಂದು ತಾವು ಹೇಳಿರುವುದೆಲ್ಲ ಸತ್ಯ ಎಂದು ಆಣೆ ಪ್ರಮಾಣ ಮಾಡಬೆಕು ಎಂದು ಮಾಜಿ

ಶಾಸಕ ಕೆ.ರಾಜು ಸವಾಲು ಎಸೆದಿದ್ದಾರೆ.

ಜಿಬಿಡಿಎ ಅಧ್ಯಕ್ಷ ಸ್ಥಾನಕ್ಕಾಗಿ ಬಕೀಟು ರಾಜಕಾರಣ ಮಾಡುತ್ತಿದ್ದಾರೆ ಎಂದು ತಮ್ಮ ವಿರುದ್ಧ ಮಾಗಡಿ ಕ್ಷೇತ್ರದ ಮಾಜಿ ಶಾಸಕ ಎ.ಮಂಜುನಾಥ್ ಟೀಕೆಯ ಹಿನ್ನೆಲೆಯಲ್ಲಿ ನಗರದಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜನೆಯಾಗಿದ್ದ ಪತ್ರಿಕಾಗೋಷ್ಠಿ ಯಲ್ಲಿ ಅವರು ಮಾತನಾಡಿದರು.

ಸಾಲ ತೀರಿಸಲು ಸೈಟು, ಜಮೀನು ಮಾರಿದ್ದೇನೆ

ಇಂದಿನ ದಿನಗಳಲ್ಲಿ ಒಂದು ಸಣ್ಣ ಅಧಿಕಾರ ಸಿಕ್ಕರೆ ಹಣ ಆಸ್ತಿ ಮಾಡಿಕೊಳ್ಳುವ ಈ ದಿನಗಳಲ್ಲಿ ನಾನು ಶಾಸಕನಾದ ಮೇಲೂ ಸಾಲ ತೀರಿಸಲು ಸೈಟು, ಜಮೀನು ಮಾರಿದ್ದೇನೆ. ರಾಜಕೀಯ ಜೀವನದಲ್ಲಿ ಅಧಿಕಾರ ಹಣಕ್ಕಾಗಿ ಎಂದೂ ಆಸೆ ಪಟ್ಟವನಲ್ಲ ನಾನು. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷನಾಗಲೂ ನಾನು ದುಂಬಾಲು ಬಿದ್ದವನಲ್ಲ ಪಕ್ಷದ ವರಿಷ್ಠರು ತೀರ್ಮಾನ ಮಾಡಿ ಅಧ್ಯಕ್ಷ ಸ್ಥಾನ ನೀಡಿದರು.

ಹೆಚ್.ಸಿ. ಬಾಲಕೃಷ್ಣ, ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ಹತ್ತಿರವಾಗಿದ್ದೇನೆ ಎಂದು ಎಲ್ಲೂ ಹೇಳಿಕೊಂಡಿಲ್ಲ ಅವರಿಂದ ಯಾವ ಅನುಕೂಲ ಪಡೆದುಕೊಂಡಿಲ್ಲ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಎನ್.ಆರ್ ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ವಿ.ಎಚ್. ರಾಜು, ಮಾಜಿ ಅಧ್ಯಕ್ಷ ಹೊಸದೊಡ್ಡಿ ಜಯಣ್ಣ, ತಾಪಂ ಮಾಜಿ ಅಧ್ಯಕ್ಷ ಭದ್ರಯ್ಯ, ಗ್ರಾಪಂ ಮಾಜಿ ಅಧ್ಯಕ್ಷರಾದ ಎಸ್. ಮಹೇಶ್, ಕೆಂಪರಾಮು ಮುಖಂಡರುಗಳಾದ ಗುರುಪ್ರಸಾದ್, ಕೆ.ಪಿ. ದೊಡ್ಡಿ ವಾಸು, ನರಸಿಂಹಯ್ಯ, ರಫಿ, ದೌಲತ್‌ಷರೀಫ್, ಆರ್. ಚಿಕ್ಕಬೈರೇಗೌಡ, ಐಯಿಷಾಬಾನು, ಉಮೇಶ್, ಚಿಕ್ಕಸ್ವಾಮಿ, ಅನಿಲ್ ಜೋಗಿಂದರ್, ದಾಸೇಗೌಡ, ಎ. ಗೋಪಿ, ವರದರಾಜು, ಸೋಮಶೇಖರ್, ಅಜ್ಮತ್, ಮಲ್ಲೇಗೌಡ, ಅಣ್ಣು, ತಿಮ್ಮಣ್ಣ ಮುಂತಾದವರು ಹಾಜರಿದ್ದರು.

ಕೀಳು ಮಟ್ಟದ ರಾಜಕೀಯ ಮಾಡೋಲ್ಲ!

**ಮಾಜಿ ಶಾಸಕ ಎ.ಮಂಜು ಅವರು ತಮ್ಮ ಬಗ್ಗೆ ಹೊರಿಸಿರುವ ಆರೋಪವನ್ನು ಕೂಡಲೆ ಹಿಂಪಡೆಯಬೇಕು. ತಮ್ಮ ಬಗ್ಗೆ ಸರಿಯಾಗಿ ತಿಳಿದುಕೊಂಡು ಮಾತನಾಡಬೇಕು. ಇಲ್ಲವೇ ಮುಂದಿನ ಶುಕ್ರವಾರ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯಕ್ಕೆ ಬಂದು ತಮ್ಮ ವಿರುದ್ದದ ಆರೋಪಗಳು ಸತ್ಯ ಎಂಬುದನ್ನು ಆಣೆ ಪ್ರಮಾಣ ಮಾಡಲಿ. ಜನರಿಗೆ ಸತ್ಯ ತಿಳಿಯಲಿ. ಬಕೀಟು ರಾಜಕಾರಣ ಮಾಡುವ ಸಂದರ್ಭ ಬಂದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಯೆ ಹೊರತು ಅಂತಹ ಕೀಳು ಮಟ್ಟಕ್ಕೆ ಹೋಗುವುದಿಲ್ಲ ಎಂದರು. ಗ್ರಾಪಂ ಮಟ್ಟದಲ್ಲಿ ಪ್ರಧಾನರಾಗಿ ರಾಜಕೀಯದಲ್ಲಿ ಎಲ್ಲೂ ಕಪ್ಪು ಚುಕ್ಕೆ ಇಲ್ಲದೆ, ಕೆಟ್ಟ ಹೆಸರು ಪಡೆಯದೆ ಶುದ್ಧ ರಾಜಕೀಯ ಮಾಡುತ್ತಾ ಬಂದಿದ್ದೇನೆ. ನಾನು ಪಿಎ ಇಟ್ಟುಕೊಳ್ಳುತ್ತೇನೆಯೇ ಹೊರತು ಪಿಎ ಕೆಲಸ ಮಾಡುವವನಲ್ಲ. ನನ್ನ ಯೋಗ್ಯತೆ ಏನೆಂಬುದು ಮಾಜಿ ಶಾಸಕ ಎ. ಮಂಜುನಾಥ್‌ಗೆ ಗೊತ್ತೇನು ಎಂದು ಪ್ರಶ್ನಿಸಿದರು. ತಾವೊಬ್ಬ ಜಮೀನ್ದಾರ, ಒಳ್ಳೆಯ ರೈತ ಕುಟುಂಬದಿಂದ ಬಂದವನು ಎಂದರು. ಮಾಜಿ ಶಾಸಕ ಎ. ಮಂಜುನಾಥ್ ನನ್ನ ಯೋಗ್ಯತೆ ಬಗ್ಗೆ ಮಾತನಾಡಿದ್ದಾರೆ ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ಪಿ.ಎ ಆಗಿ ಕೆಲಸ ಮತ್ತು ಕಾರಿನ ಬಾಗಿಲು ತೆಗೆಯುತ್ತಾರೆ. ಜಿ.ಬಿ.ಡಿ.ಎ ಅಧ್ಯಕ್ಷರಾಗಲು ಬಕೆಟ್ ರಾಜಕಾರಣ ಮಾಡುತ್ತಿದ್ದಾರೆ ಎಂದು ಹೇಳಿಕೆ ನೀಡಿದ್ದಾರೆ. ಗ್ರಾಪಂ ಮಟ್ಟದಲ್ಲಿ ಪ್ರಧಾನರಾಗಿ ರಾಜಕೀಯದಲ್ಲಿ ಎಲ್ಲೂ ಕೂಡ ನ

ವಿದ್ಯಾರ್ಥಿಗಳು ದೇಶ ಆಳುವ ನಾಯಕತ್ವ ಗುಣ ಮೈಗೂಡಿಸಿಕೊಳ್ಳಿ : ಸಿ. ಪುಟ್ಟರಂಗಶೆಟ್ಟಿ

ಚಾಮರಾಜನಗರ: ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಚುನಾಯಿತ ಪ್ರತಿನಿಧಿ, ಉತ್ತಮ ಸಂಸದೀಯ ಪಟುಗಳಾಗಿ ದೇಶ ಆಳುವಂತಹ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಳ್ಳುವಂತೆ ಪಶುಸಂಗೋಪನೆ, ರೇ??ಮ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ನಗರದ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಸಹಯೋಗದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಚಾಮರಾಜನಗರ ತಾಲ್ಲೂಕುಮಟ್ಟದ ಯುವ ಸಂಸತ್ ಸಭೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ವಿಧಾನಸಭೆಯ ಕಾರ್ಯಕಲಾಪಗಳ ಬಗ್ಗೆ ಪ್ರಾಥಮಿಕ ಹಂತದಲ್ಲಿಯೇ ಪ್ರಾಯೋಗಿಕ ಅರಿವು ಮೂಡಿಸುವ ಸದುದ್ದೇಶದೊಂದಿಗೆ ತಾಲ್ಲೂಕುಮಟ್ಟದ ಯುವ ಸಂಸತ್ ಸಭೆ? ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರಿಂದ ಮಕ್ಕಳಲ್ಲಿ ನಾಯಕತ್ವ ಗುಣಗಳು ವೃದ್ಧಿಸಲಿವೆ. ವಿದ್ಯಾರ್ಥೀ ಜೀವನದಲ್ಲಿಯೇ ಪ್ರಜಾಪ್ರಭುತ್ವದ ಮೌಲ್ಯಗಳನ್ನು ವಿದ್ಯಾರ್ಥಿಗಳು ಅರಿಯಬೇಕು. ಸಂವಿಧಾನದ ಅಶಯಗಳನ್ನು ಈಡೇರಿಸಲು ಮುಂದಾಗಬೇಕು ಎಂದು ಸಚಿವರು ಕಿವಿಮಾತು ಹೇಳಿದರು

ಸಚಿವರು ತಮ್ಮ ಸ್ವಂತ ಅನುಭವದ ಮೂಲಕ ವಿಧಾನಸಭೆಯ ಚಿತ್ರಣವನ್ನು ವಿವರಿಸಿ ಮಾತನಾಡಿ ಸರ್ಕಾರದ ಸಂಸತ್ ಸಭೆಯಲ್ಲಿ ಆಡಳಿತ ಪಕ್ಷವು ಸಭಾಧ್ಯಕ್ಷರ ಬಲಭಾಗದಲ್ಲಿ ಹಾಗೂ ವಿರೋಧ ಪಕ್ಷವು ಎಡಭಾಗದಲ್ಲಿ ಆಸೀನರಾಗಿರುತ್ತಾರೆ. ವಿರೋಧ ಪಕ್ಷದ ಸಾಲಿನಲ್ಲಿ ಸಭಾ ಉಪಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಹಾಗೂ ಉಪನಾಯಕರು ಉಪಸ್ಥಿತರಿರುತ್ತಾರೆ. ಸಭೆಯಲ್ಲಿ ರಾಷ್ಟ್ರಗೀತೆ ಹಾಡುವ ಹೇಳುವ ಮೂಲಕ ಕಾರ್ಯಕಲಾಪಗಳು ಪ್ರಾರಂಭಗೊಳ್ಳಲಿವೆ. ಹಾಗೆಯ ಸದಸ್ಯರು ಯಾರಾದರು ಮೃತಪಟ್ಟದ್ದಲ್ಲಿ ಅವರಿಗೆ ಸಂತಾಪ ಸೂಚಿಸಲಾಗುತ್ತದೆ ಎಂದರು.

ಅಜೆಂಡಾದಂತೆ ಪ್ರಶ್ನೋತ್ತರ ಕಲಾಪಗಳು ನಡೆಯುತ್ತದೆ. ವಿರೋಧ ಪಕ್ಷಕ್ಕೆ ಎಚ್ಚು ತುರ್ತು ವಿಷಯಗಳ ಚರ್ಚೆಗಳಿಗೆ ಅಧ್ಯಕ್ಷರು ಸಮಯ ನಿಗದಿಪಡಿಸಿ ನಿಯಮಾವಳಿಗಳಂತೆ ಅವಕಾಶ ನೀಡುವರು. ವಿಧಾನ ಪರಿಷತ್ತನ್ನು ಚಿಂತಕರ ಚಾವಣಿ ಎಂದು ಕರೆಯಲಾಗುತ್ತದೆ. 75 ಸದಸ್ಯ ಬಲ ಹೊಂದಿರುವ ಈ ಸದನಕ್ಕೆ ಶಿಕ್ಷಕರು, ಪದವೀಧರರು, ನಾಮನಿರ್ದೇಶಿತ ಹಾಗೂ ಶಾಸಕರ ಕ್ಷೇತ್ರಗಳಿಂದ ಪ್ರತಿನಿಧಿಗಳು ಆಯ್ಕೆಯಾಗುತ್ತಾರೆ. ಇಲ್ಲಿ ಜವಾಬ್ದಾರಿಯುತ ಹಾಗೂ ವಿಧಾನಸಭೆಯ ವಿಷಯಗಳನ್ನು ದೀರ್ಘಗಾಲ ಚರ್ಚೆಗಳು ನಡೆಯುತ್ತವೆ ಎಂದು ಸಚಿವರು ತಿಳಿಸಿದರು. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರವಾಗಿಯೇ ಪ್ರಜಾಪ್ರಭುತ್ವವಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನವು ಪ್ರಜೆಗಳಿಗೆ ಅಗಾಧ ಶಕ್ತಿಯನ್ನು ನೀಡಿದೆ. ವಿದ್ಯಾರ್ಥಿ ಹಂತದಲ್ಲಿ ಇಂತಹ ಸಭೆ ಹಾಗೂ ಕಲಾಪಗಳ ಬಗ್ಗೆ ತಿಳಿದುಕೊಳ್ಳುವುದು, ಭಾಗವಹಿಸುವುದು ಬಹುಮುಖ್ಯವಾಗಿದೆ. ನಾಳಿನ ದಿನಗಳಲ್ಲಿ ಇದೇ ಯುವಜನತೆ ಶಾಸಕರಾಗಿ, ಸಂಸದರಾಗಿ ನಾಡನ್ನು ಆಳುವ ಸನಾಯಕರಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಇದೇ ವೇಳೆ ತಿಳಿಸಿದರು.

ನಗರಾಭಿವೃದ್ಧಿ ಪ್ರಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ತಹಶೀಲ್ದಾರರಾದ ಗಿರಿಜಾ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗಿರಿಧರ್, ಭೋಗಪುರದ ಸರ್ಕಾರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಪಿ. ದೇವರಾಜು, ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಅಶ್ವಿನಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಮೇಘನಾ, ತಾಲೂಕು ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ಮೀನಾಕ್ಷಿ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಜೈ ಶಂಕರ್, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆಂಪರಾಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯ ಶಾಸ್ತ್ರ ಮುಖ್ಯ ಶಿಕ್ಷಕರಾದ ಶಿವರಾಜು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಲಿಂಗದಹಳ್ಳಿ ಗೇಟ್‌ಬಳಿ ಲಾರಿ-ಬೈಕ್ ಅಪಘಾತಕ್ಕೆ ಯುವಕ ಬಲಿ

ಬೇಜವಾಬ್ದಾರಿ ರಸ್ತೆ ಕಾಮಗಾರಿ ಖಂಡಿಸಿ ಪ್ರತಿಭಟನೆ

ತಿಪಟೂರು: ತಾಲೂಕಿನ ಲಿಂಗದಹಳ್ಳಿ ಗೇಟ್ ಬಳಿ ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರನ್ನು ನಗರದ ಗಾಂಧಿನಗರ ನಿವಾಸಿ ಆಸೀಫ್ (35) ಎಂದು ಗುರುತಿಸಲಾಗಿದೆ.

ಅಪಘಾತದ ಬಳಿಕ ಲಾರಿ ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ ಎನ್ನಲಾಗಿದ್ದು, ಇದರಿಂದ ಮೃತರ ಕುಟುಂಬಸ್ಥರು ಹಾಗೂ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು. ವಿಷಯ ತಿಳಿದು ಮುಸ್ಲಿಂ ಸಮುದಾಯದವರು ಸೇರಿದಂತೆ ಸಾರ್ವಜನಿಕರು ಸ್ಥಳದಲ್ಲಿ ಜಮಾಯಿಸಿದರು.

ತಿಪಟೂರು–ಹಾಸನ ರಸ್ತೆ ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿದ್ದು, ಸುರಕ್ಷತಾ ಕ್ರಮಗಳನ್ನು ಸಮರ್ಪಕವಾಗಿ ಕೈಗೊಳ್ಳದಿರುವುದೇ ಅಪಘಾತಗಳಿಗೆ ಕಾರಣವಾಗುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದರು. ಕಳೆದ ಒಂದು ವರ್ಷದಿಂದ ಕಾಮಗಾರಿ ನಡೆಯುತ್ತಿದ್ದು, ಅವೈಜ್ಞಾನಿಕ ಕಾಮಗಾರಿ ಹಾಗೂ ಸೂಕ್ತ ಸೂಚನಾ ಫಲಕಗಳ ಕೊರತೆಯಿಂದ ಪದೇಪದೇ ಅಪಘಾತಗಳು ಸಂಭವಿಸುತ್ತಿವೆ. ಇದುವರೆಗೆ ನಾಲ್ಕಕ್ಕೂ ಹೆಚ್ಚು ಅಪಘಾತಗಳು ನಡೆದಿದ್ದು, ಇದೀಗ ಮತ್ತೊಂದು ಜೀವ ಬಲಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಮಗಾರಿ ಪೂರ್ಣಗೊಂಡಿರುವ ಕೆಲವೆಡೆ ಅಡ್ಡ ಕಂಬಿಗಳನ್ನು ತೆರವುಗೊಳಿಸಿಲ್ಲ. ಒಂದು ಬದಿಯಲ್ಲಿ ಕಾಮಗಾರಿ ನಡೆಸಿ ಮತ್ತೊಂದು ಬದಿಯನ್ನು ಹಾಗೆಯೇ ಬಿಡಲಾಗಿದ್ದು, ಭಾರೀ ವಾಹನಗಳು ಬಂದಾಗ ದ್ವಿಚಕ್ರ ವಾಹನ ಸವಾರರು ರಸ್ತೆ ಬದಿಗೆ ತೆರಳಲು ಸಾಧ್ಯವಾಗದೆ ಅಪಾಯ ಎದುರಿಸುತ್ತಿದ್ದಾರೆ. ಕಾಮಗಾರಿ ಪೂರ್ಣಗೊಳ್ಳುವವರೆಗೆ ಭಾರೀ ವಾಹನಗಳ ಸಂಚಾರ ನಿರ್ಬಂಧಿಸಬೇಕು ಎಂದು ಒತ್ತಾಯಿಸಿದರು. ಘಟನೆ ಖಂಡಿಸಿ ಸಾರ್ವಜನಿಕರು ತಾಲೂಕು ಆಡಳಿತ ಸೌಧದ ಮುಂಭಾಗ ಪ್ರತಿಭಟನೆ ನಡೆಸಿ, ರಸ್ತೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು, ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಅಪಘಾತಕ್ಕೆ ಕಾರಣವಾದ ವಾಹನವನ್ನು ಪತ್ತೆಹಚ್ಚಿ ಚಾಲಕನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಈ ಕುರಿತು ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸ್ಥಳಕ್ಕೆ ಡಿಎಸ್ಪಿ ಉಮೇಶ್, ನಗರ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ರವಿಕುಮಾರ್ ಹಾಗೂ ಗ್ರಾಮಾಂತರ ಠಾಣೆ ವೃತ್ತ ನಿರೀಕ್ಷಕ ಚಂದ್ರಶೇಖರ್ ವೆಂಕಟೇಶ್ ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರು. ರಸ್ತೆ ಸುರಕ್ಷತಾ ಸಮಸ್ಯೆಗಳನ್ನು ಸರಿಪಡಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಡಲಾಯಿತು.

ಪ್ರತಿಭಟನೆಯಲ್ಲಿ ಮದೀನ ಮಸೀದಿ ಮುತವಲ್ಲಿ ಮುನಾವರ್, ಭೀಮ್ ಆರ್ಮಿ ಅಧ್ಯಕ್ಷ ಜಕ್ಕನಹಳ್ಳಿ ಮೋಹನ್, ಜೆಡಿಎಸ್ ಮುಖಂಡ ಇಮ್ರಾನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಪ್ರಧಾನ ದಸರಾ ಕವಿಗೋಷ್ಠಿಗೆ ಭೇರ್ಯ ರಾಮಕುಮಾರ್ ಆಯ್ಕೆ



೮೦ ರಿಯ ಸಾಹಿತಿ ಹಾಗೂ ಪರಿಸರ ಚಿಂತಕ ಡಾ .ಭೇರ್ಯ ರಾಮಕುಮಾರ್ ಅವರು ಮೈಸೂರು ದಸರಾ ಅಂಗವಾಗಿ ನಡೆಯಲಿರುವ ಪ್ರಧಾನ ಕವಿಗೋಷ್ಠಿಗೆ ಆಯ್ಕೆ ಆಗಿದ್ದಾರೆ.

ಭೇರ್ಯ ರಾಮಕುಮಾರ್ ಅವರು ನವಚೇತನ ಹಾಗೂ ಬದುಕು ಎಂಬ ಕವನ ಸಂಕಲನಗಳನ್ನು, ನಾವು ಬದುಕಲು ಬಿಡಿ ಎಂಬ ನಾಟಕ ಸಂಕಲನಗಳನ್ನು ಹೊರ ತಂದಿದ್ದಾರೆ. ಮತ್ತೊಂದು ಕವನ ಸಂಕಲನ ಬಾಳೊಂದು ಪಗಡೆಯಾಟ ಕವನ ಸಂಕಲನವು ಸದ್ಯದಲ್ಲೇ ಲೋಕಾರ್ಪಣೆ ಆಗಲಿದೆ.1985 ರಿಂದ ಇಲ್ಲಿಯವರೆಗೆ ಸುಮಾರು 200 ಕೂ ಹೆಚ್ಚು ಕವಿಗೋಷ್ಠಿಗಳಲ್ಲಿ ಕವನ ವಾಚನ ಮಾಡಿದ್ದಾರೆ.

ಸಾಹಿತ್ಯ ಸಂಘಟಕರು ಆಗಿರುವ ಇವರು ಗ್ರಾಮಾಂತರ ಬುದ್ಧಿಜೀವಿಗಳ ಬಳಗದ ಅಧ್ಯಕ್ಷರಾಗಿ ಇದುವರೆಗೆ 365 ರಾಜ್ಯಮಟ್ಟದ ಸಾಹಿತ್ಯ ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ.ಪರಿಸರ ಚಿಂತಕರೂ ಆಗಿರುವ ಇವರು 1 ಸಾವಿರಕ್ಕೂ ಹೆಚ್ಚು ಶಾಲಾ ಕಾಲೇಜುಗಳಲ್ಲಿ ಪರಿಸರ ಜಾಗೃತಿ ಉಪನ್ಯಾಸಗಳನ್ನು ನೀಡಿದ್ದಾರೆ.

ಭೇರ್ಯ ರಾಮಕುಮಾರ್ ಸ್ವತಃ ನೇತ್ರದಾನಿ ಹಾಗೂ ದೇಹ ದಾನಿ ಯಾಗಿದ್ದು ಮೈಸೂರಿನ ಕೆ. ಆರ್.ಆಸ್ಪತ್ರೆಗೆ ತಮ್ಮ ನೇತ್ರ ಗಳನ್ನು ಹಾಗೂ ಮೈಸೂರು ವೈದ್ಯಕೀಯ ಕಾಲೇಜಿಗೆ ತಮ್ಮ ದೇಹ ದಾನಕ್ಕೆ ಒಪ್ಪಿಗೆ ಪತ್ರ ನೀಡಿದ್ದಾರೆ.

ಇವರ ಸಾಹಿತ್ಯ ಸೇವೆ ಹಾಗೂ ಪರಿಸರ ಸೇವೆಯನ್ನು ಪರಿಗಣಿಸಿ 1993 ರ ಕೇಂದ್ರ ಸರ್ಕಾರದ ನೆಹರು ಯುವ ಪ್ರಶಸ್ತಿ, 2022 ರಲ್ಲಿ ಮೈಸೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, 2023 ರಲ್ಲಿ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ ,2026 ರ್ಯಾಲಿ ಪರಿಸರ ರತ್ನ ಪ್ರಶಸ್ತಿ ಹಾಗೂ 2026 ರ ಪೂರ್ಣ ಚಂದ್ರ ತೇಜಸ್ವಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಪ್ರದಾನ ದಸರಾ ಕವಿಗೋಷ್ಠಿ ಕಾರ್ಯಕ್ರಮವು ಮುಂಬರುವ 17 ರಂದು ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ನಡೆಯಲಿದೆ.

ಹಾಡಿ ಜನರಿಗೆ ಸೌಲಭ್ಯ ಒದಗಿಸಲು ವಿಶೇಷ ಪ್ರಜಾಸೇವೆ ಅಭಿಯಾನ : ಸಚಿವ ರಘುಮೂರ್ತಿ

ಚಾಮರಾಜನಗರ: ಜಿಲ್ಲೆಯ ಯಳಂದೂರು ತಾಲೂಕು ಹಾಗೂ ಬಿಳಿರಂಗನಬೆಟ್ಟ ಸಮೀಪದಲ್ಲಿರುವ ಹಾಡಿಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ವಿಶೇಷ ಪ್ರಜಾಸೇವೆ ಅಭಿಯಾನ ಕೈಗೊಳ್ಳುವಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಟಿ. ರಘುಮೂರ್ತಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬಿಳಿರಂಗನಬೆಟ್ಟದಲ್ಲಿ ದೇಗುಲ ದರ್ಶನ ಮಾಡಿದ ಸಚಿವ ರಘುಮೂರ್ತಿ ಬಳಿಕ ಸಮೀಪದಲ್ಲಿರುವ ಹಾಡಿಗಳಿಗೆ ಭೇಟಿ ನೀಡಿ ಆದಿವಾಸಿಗಳ ಸಮಸ್ಯೆಗಳನ್ನು ಆಲಿಸಿದ ಬಳಿಕ ಈ ವಿಷಯವನ್ನು ತಿಳಿಸಿದರು.

ಬುಡಕಟ್ಟು ಜನರು ವಾಸವಿರುವ ಹಲವಾರು ಸ್ಥಳಗಳಿಗೆ ಭೇಟಿ ನೀಡಿದ್ದೇನೆ. ಅವರು ತಮ್ಮ ಅಹವಾಲುಗಳನ್ನು ಸಲ್ಲಿಸಿದ್ದಾರೆ. ಇದನ್ನು ಗಮನಿಸಿದ ನಂತರ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಸರ್ಕಾರವೇ ಅವರ ಮನೆ ಬಾಗಿಲಿಗೆ ತೆರಳಿ ಸೇವೆ ಒದಗಿಸುವ ಕಾರ್ಯ ಆಗಬೇಕು. ಈ ನಿಟ್ಟಿನಲ್ಲಿ ಈ ಭಾಗದ ಜನರಿಗಾಗಿ ವಿಶೇಷ ಪ್ರಜಾಸೇವೆ ಅಭಿಯಾನ ಕೈಗೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಹಾಡಿಗಳಲ್ಲಿ ಕೆಲವರಿಗೆ 40–50 ವರ್ಷಗಳ ಹಿಂದೆ ಮನೆ ನಿರ್ಮಿಸಿಕೊಡಲಾಗಿದೆ. ಅದೀಗ ಶಿಥಿಲಾವಸ್ಥೆಯಲ್ಲಿದೆ. ಇದನ್ನು ಪರಿಶೀಲಿಸಲಾಗಿದ್ದು, ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ. ಸಿಎಂ ಆದಿವಾಸಿ ಗೃಹ ಭಾಗ್ಯ ಯೋಜನೆಯಡಿಯಲ್ಲಿ ಮನೆ ನಿರ್ಮಿಸಿಕೊಡಲಾಗುವುದು. ಅರ್ಹ ಫಲಾನುಭವಿಗಳಿಗೆ ಕಾಲಮಿತಿಯಲ್ಲಿ ಇದನ್ನು ಜಾರಿಗೆ ತರಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ರಘುಮೂರ್ತಿ ತಿಳಿಸಿದರು.

ಬಂಗ್ಲೆಪೊ?ಡು, ಹೊಸಪೊ?ಡು, ಯರಕನಗದ್ದೆ ಪೊ?ಡು ಕಾಲೋನಿ, ಪ್ರದೇಶಗಳಿಗೆ ಭೇಟಿ ನೀಡಿದ ಸಚಿವರು, ಆದಿವಾಸಿಗಳ ಜ್ವಲಂತ ಸಮಸ್ಯೆಗಳ ಬಗ್ಗೆ ತಾಳ್ಮೆಯಿಂದ ಆಲಿಸಿದರು. ಬಿಳಿಗಿರಿರಂಗನ ಬೆಟ್ಟದ ಮುಖ್ಯ ರಸ್ತೆಯಿಂದ ಮಂಜುಗುಡಿ ಪೊ?ಡು ಹಾಗೂ ಕಲ್ಯಾಣಿ ಪೊ?ಡು ಹಾಡಿಗಳಿಗೆ ಸಂಪರ್ಕ ಸೇತುವೆ ನಿರ್ಮಾಣ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರಿಗೆ ಸಚಿವರು ಸೂಚಿಸಿದರು.

ಮಂಜುಗುಡಿ ಪೊ?ಡು, ಕಲ್ಯಾಣಿ ಪೊ?ಡು ಭಾಗದಲ್ಲಿ ಕರೆಂಟ್ ಇಲ್ಲ ಎಂದು ಜನರು ತಿಳಿಸಿದರು. ಕೂಡಲೇ ಚೆಸ್ಕಾಂ ಇಂಜಿನಿಯರ್ಗಳೊಂದಿಗೆ ಚರ್ಚೆ ಮಾಡಿದ ಸಚಿವರು ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಹಾಡಿಗಳ ಬಹುತೇಕ ಮಂದಿ ಪುಡ್ಡಿಟ್ ಪೂರೈಕೆಯಾಗುತ್ತಿಲ್ಲ ಎಂದು ಅಹವಾಲು ಸಲ್ಲಿಸಿದರು. ಅದಕ್ಕೆ ಉತ್ತರಿಸಿದ ಸಚಿವರು, ಕೆಲವು ತಾಂತ್ರಿಕ ಸಮಸ್ಯೆಗಳಿಂದ ಇದು ವಿಳಂಬವಾಗಿದೆ. ನಾಲ್ಕೈದು ದಿನದಲ್ಲಿ ಬಗೆಹರಿಯಲಿದ್ದು, ಕೂಡಲೇ ಪುಡ್ಡಿಟ್ ವಿತರಿಸಲಾಗುವುದು ಮತ್ತು ಬಾಕಿ ಬರಬೇಕಾಗಿದ್ದ ಫುಡ್ ಕಿಟ್ಗಳನ್ನೂ ಪೂರೈಕೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಬುಡಕಟ್ಟು ಜನರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಹಕ್ಕು ಪತ್ರ, ಇನ್ಕಮ್ ಸರ್ಟಿಫಿಕೇಟ್ ಸೇರಿದಂತೆ ಸರ್ಕಾರದಿಂದ ಕೊಡಬೇಕಾಗಿರುವ ಎಲ್ಲ ದಾಖಲೆಗಳು ಸಿಗಬೇಕು. ಈ ನಿಟ್ಟಿನಲ್ಲಿ ಫಲಾನುಭವಿಗಳ ಮನೆ ಬಾಗಿಲಿಗೆ ತೆರಳಿ ಇವುಗಳನ್ನು ವಿತರಿಸಬೇಕು ಎಂದು ತಹಶೀಲ್ದಾರ್ ಹಾಗೂ ತಾಲೂಕು ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

ಇದೇ ವೇಳೆ ಕಾಡಿನ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಾಡುವ "ಅಡವಿ" ಕೇಂದ್ರಕ್ಕೆ ಸಚಿವರು ಭೇಟಿ ನೀಡಿದರು. "ಅಡವಿ" ಬ್ರಾ್ಯಂಡ್ನ ಶೀಗೆಕಾಯಿ, ನೆಲ್ಲಿಕಾಯಿ ಪೌಡರ್, ನೇರಳೆ ಸ್ಕಾ? ಹಾಗೂ ಇತರೆ ಉತ್ಪನ್ನಗಳನ್ನು ವೀಕ್ಷಿಸಿ ಗುಣಮಟ್ಟದ ಬಗ್ಗೆ ಮಾಹಿತಿ ಪಡೆದರು.

ಕೊಳ್ಳೇಗಾಲ ಸರ್ಕಾರಿ ಪ್ರವಾಸಿ ಮಂದಿರದಲ್ಲಿ ಆಶ್ರಮ ಶಾಲೆಗಳ (ಆದಿವಾಸಿ ಮಕ್ಕಳ ವಸತಿ ಶಾಲೆ) ಶಿಕ್ಷಕರನ್ನು ಭೇಟಿ ಮಾಡಿ ಗುಣಮಟ್ಟದ ಶಿಕ್ಷಣ ನೀಡುವಂತೆ ಎಲ್ಲರೂ ಪ್ರಯತ್ನಿಸಬೇಕು. ಈ ವಿಷಯದಲ್ಲಿ ಯಾವುದೇ ರಾಜೀ ಇರಬಾರದು ಎಂದು ತಿಳಿಸಿದರು.

ಹಾಡಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಜನರು ಸಮಸ್ಯೆ ಭಿನ್ನವಿಸಿಕೊಂಡರು. ಸಂಬಂಧಪಟ್ಟ ಇಂಜಿನಿಯರ್ಗಳಿಂದ ಸಚಿವರು ಮಾಹಿತಿ ಪಡೆದರು. ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಇರುವುದರಿಂದ ಕೆಲವು ಸಮಸ್ಯೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದಾಗ, ಕೂಡಲೇ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಚರ್ಚಿಸಿದ ಸಚಿವರು ಜಲ ಜೀವನ್ ಮಿಷನ್ ಯೋಜನೆಯಡಿ ನೀರು ಪೂರೈಸಬೇಕು. ತ್ವರಿತವಾಗಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಸೂಚನೆ ನೀಡಿದರು.

ನರೇಗಾ ಯೋಜನೆಯಡಿ ಬಾಕಿ ವೇತನ ಪೂರೈಸುವ ವಿಷಯದಲ್ಲಿಯೂ ಸೂಕ್ತ ಕ್ರಮ ತೆಗೆದುಕೊಳ್ಳಲು ಸಚಿವರು ಆದೇಶಿಸಿದ್ದಾರೆ. ಆದಿವಾಸಿ ಅಭಿವೃದ್ಧಿ ನಿಗಮ ಅತಿ ಶೀಘ್ರದಲ್ಲೇ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲಿದೆ ಎಂದು ಸಚಿವ ರಘುಮೂರ್ತಿ ಸ್ಪಷ್ಟಪಡಿಸಿದರು.

ನಂತರ ಕೊಣನಕೆರೆ ಆಶ್ರಮ ಶಾಲೆಗೆ

ನೆನ್ನೆ ನೆನ್ನೆಗೆ, ನಾಳೆ ನಾಳೆಗೆ, ಇಂದು ನಮ್ಮದೇ, ಚಿಂತೆ ಏತಕೆ?

। ಸ್ವಾಮಿನಾಥನ್
ಮೊ:9880041516

ಮನುಷ್ಯನ ಬದುಕು ಮೂರು ಕಾಲಗಳ ನಡುವೆ ಗಿರಕಿ ಹೊಡೆಯುತ್ತಿರುತ್ತದೆ ? ನೆನ್ನೆ, ಇಂದು ಮತ್ತು ನಾಳೆ. ನೆನ್ನೆ ನಮ್ಮ ಹಿಂದೆ ಉಳಿದಿದೆ, ನಾಳೆ ನಮ್ಮ ಮುಂದೆ ಇದೆ, ಇಂದು ಮಾತ್ರ ನಮ್ಮ ಕೈಯಲ್ಲಿದೆ. ಆದರೂ ನಮ್ಮ ಮನಸ್ಸು ನಿರಂತರವಾಗಿ ನೆನ್ನೆಯ ನೆನಪುಗಳು ಮತ್ತು ನಾಳೆಯ ಚಿಂತೆಗಳ ನಡುವೆ ಓಡಾಡುತ್ತಿರುತ್ತದೆ. ಹೀಗಾಗಿ, ಕಣ್ಣ ಮುಂದಿರುವ ಇಂದಿನ ಕ್ಷಣವನ್ನು ಸಂಪೂರ್ಣವಾಗಿ ಅನುಭವಿಸುವುದನ್ನೇ ನಾವು ಕೆಲವೊಮ್ಮೆ ಮರೆತುಬಿಡುತ್ತೇವೆ. ಬಹುಶಃ ಆಧುನಿಕ ಮನುಷ್ಯನ ಅತಿ ದೊಡ್ಡ ಗೊಂದಲವೇ ಇದು.

1. **ಕರಗಿದ ನೆನ್ನೆ:** ನೆನಪು ಮತ್ತು ಪಾಠ
ನೆನ್ನೆ ಎಂದರೆ ಕೇವಲ ಕಳೆದ ದಿನವಲ್ಲ; ಅದು ಬಾಲ್ಯ, ಶಾಲೆ, ವೃತ್ತಿಜೀವನ, ಕುಟುಂಬ, ಗೆಲುವು ಮತ್ತು ಸೋಲುಗಳ ಅನುಭವಗಳ ಸಂಗ್ರಹ. ಕೆಲವು ನೆನಪುಗಳು ನಗಿಸಿದರೆ, ಮತ್ತೆ ಕೆಲವು ?ಆ ದಿನ ಹಾಗೆ ಮಾಡಬಾರದಿತ್ತು? ಎಂಬ ಪಶ್ಚಾತ್ತಾಪವನ್ನು ಉಳಿಸುತ್ತವೆ. ಆದರೆ ಕಳೆದುಹೋದ ನೆನ್ನೆಯನ್ನು ಬದಲಿಸಲು, ಮಾಡಿದ ತಪ್ಪನ್ನು ಅಳಿಸಲು ಅಥವಾ ಹೇಳಿದ ಮಾತನ್ನು ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ. ಆದರೆ ನೆನ್ನೆಯಿಂದ ಕಲಿಯಲು ನಮಗೆ ಅವಕಾಶವಿದೆ. ತಪ್ಪುಗಳು ಮುಂದಿನ ನಿರ್ಧಾರಗಳಿಗೆ ಪಾಠವಾಗಬಹುದು; ನೋವು ನಮ್ಮನ್ನು ಹೆಚ್ಚು ಸಹಾನುಭೂತಿಯುಳ್ಳವರನ್ನಾಗಿ ಮಾಡಬಹುದು. ನೆನ್ನೆಯನ್ನು ನೆನಪಾಗಿ ಇಟ್ಟುಕೊಳ್ಳಬೇಕು; ಬದುಕಿನ ವಿಳಾಸವನ್ನಾಗಿ ಮಾಡಿಕೊಳ್ಳಬಾರದು.

2. **ಗೊತ್ತಿಲ್ಲದ ನಾಳೆ:** ಸಿದ್ಧತೆ ಇರಲಿ, ಆತಂಕ ಬೇಡ
ನಾಳೆಗಾಗಿ ಯೋಜಿಸುವುದು ಬದುಕಿನ ಸಹಜ ಹಾಗೂ ಅಗತ್ಯ ಭಾಗ. ಹಣ ಉಳಿಸುವುದು, ಮಕ್ಕಳ ವಿದ್ಯಾಭ್ಯಾಸ, ನಿವೃತ್ತಿಯ ಸಿದ್ಧತೆ ಹಾಗೂ ಆರೋಗ್ಯ ಕಾಪಾಡಿಕೊಳ್ಳುವುದು ಮುಖ್ಯ. ಆದರೆ ಯೋಜನೆ ರೂಪಿಸುವುದು ಮತ್ತು ಆತಂಕಪಡುವುದು ಒಂದೇ ಅಲ್ಲ.

ಬದಲಾಗುತ್ತಿರುವ ತಂತ್ರಜ್ಞಾನ, ಭವಿಷ್ಯದ ಆರೋಗ್ಯ, ಸಾಮಾಜಿಕ ಸಂಬಂಧಗಳು ಹೇಗೆ ರೂಪುಗೊಳ್ಳುತ್ತವೆ ಎಂಬ ಪ್ರಶ್ನೆಗಳಿಗೆ ಯಾರ ಬಳಿಯಲ್ಲೂ ಸಂಪೂರ್ಣ ಉತ್ತರಗಳಿಲ್ಲ; ಏಕೆಂದರೆ ಭವಿಷ್ಯದ ಸ್ವಭಾವವೇ ಅನಿಶ್ಚಿತತೆ. ಭವಿಷ್ಯಕ್ಕಾಗಿ ಸಿದ್ಧರಾಗುವುದು ಜಾಣ್ಮೆ, ಆದರೆ ಅದರ ಭಯದಲ್ಲೇ ವರ್ತಮಾನವನ್ನು ಕಳೆದುಕೊಳ್ಳುವುದು ಅನಗತ್ಯ ಭಾರ.

3. **ಕೈಯಲ್ಲಿರುವ ಇಂದು:** ಸವಾಲುಗಳು ಮತ್ತು ಆದ್ಯತೆಗಳು
ಇಂದಿನ ಮನುಷ್ಯನಿಗೆ ಹಿಂದಿನ ಪೀಳಿಗೆಗಿಂತ ಹೆಚ್ಚಿನ ಸೌಲಭ್ಯಗಳಿವೆ. ಸಮಯ ಉಳಿಸುವ ಸಾಧನಗಳಿವೆ, ಮಾಹಿತಿ ಕ್ಷಣಾರ್ಧದಲ್ಲಿ ಸಿಗುತ್ತದೆ. ಆದರೆ ಸಮಯ ಉಳಿಸುವ ಸಾಧನಗಳು ಹೆಚ್ಚಾದಂತೆ ನಮ್ಮ ಬಳಿ ನಿಜಕ್ಕೂ ಸಮಯ ಉಳಿಯುತ್ತಿದೆಯೇ?

ಇಂದು ನಮ್ಮ ಬಳಿ ಸಮಯದ ಕೊರತೆಗಿಂತ ಆದ್ಯತೆಗಳ ಗೊಂದಲವೇ ಹೆಚ್ಚಾಗಿದೆ. ನಾವು ಸಮಯವನ್ನು ಕೇವಲ ಸುಮ್ಮನೆ ಕುಳಿತು ವ್ಯರ್ಥ ಮಾಡುವುದಿಲ್ಲ; ಬದಲಿಗೆ, ಮಾಡಬೇಕಾದ ಕೆಲಸವನ್ನು ಬಿಟ್ಟು ಬೇರೆ ಯಾವುದೋ ಅನಗತ್ಯ ವಿಚಾರಗಳಲ್ಲಿ ತೊಡಗಿಸಿಕೊಳ್ಳುತ್ತೇವೆ. ಅನಗತ್ಯ ಚರ್ಚೆಗಳು, ಆತುರದ ನಿರ್ಧಾರಗಳು, ಪ್ರತಿಯೊಂದು ಕೆಲಸವನ್ನೂ ಮುಂದೂಡುವ ಅಭ್ಯಾಸ ಹಾಗೂ ಎಲ್ಲವನ್ನೂ ನಾವೇ ಒಂದೇ ಬಾರಿಗೆ ಮಾಡಬೇಕೆಂಬ ಧಾವಂತ ನಮ್ಮ ಸಮಯವನ್ನು ಕರಗಿಸುತ್ತವೆ.

ತಂತ್ರಜ್ಞಾನ ಮತ್ತು ಹೋಲಿಕೆಯ ಜಗತ್ತು: ಸಾಮಾಜಿಕ ಜಾಲತಾಣಗಳು ನಮ್ಮ ಮುಂದೆ ಹೋಲಿಕೆಯ ದೊಡ್ಡ ಜಗತ್ತನ್ನೇ ತೆರೆದಿವೆ. ಯಾರೋ ವಿದೇಶ ಪ್ರವಾಸದಲ್ಲಿರುವುದು ಅಥವಾ ಯಶಸ್ಸನ್ನು ಸಂಭ್ರಮಿಸುವುದನ್ನು ನೋಡಿ, ಅವರ ಆಯ್ದ ಪ್ರದರ್ಶಿತ ಕ್ಷಣಗಳೊಂದಿಗೆ ನಮ್ಮ ಸಂಪೂರ್ಣ ಜೀವನದ ಏರಿಳಿತಗಳನ್ನು ಹೋಲಿಸಿಕೊಳ್ಳುತ್ತೇವೆ.

ಅಷ್ಟೇ ಅಲ್ಲ, ಸುಂದರ ಸ್ಥಳಕ್ಕೆ ಹೋದಾಗ ಅಥವಾ ಕುಟುಂಬದ ಸಮಾರಂಭದಲ್ಲಿದ್ದಾಗ, ಆ ಕ್ಷಣವನ್ನು ಅನುಭವಿಸುವ ಬದಲು ಕ್ಯಾಮೆರಾದಲ್ಲಿ ದಾಖಲಿಸುವುದೇ ಮುಖ್ಯವಾಗಿಬಿಡುತ್ತದೆ. ಜೀವನದ ಪ್ರತಿಯೊಂದು ಕ್ಷಣವೂ ನೆನಪಿಗಾಗಿ ಕಾಯ್ದಿರಿಸಬೇಕಾದ ಘಟನೆಯಲ್ಲ, ಕೆಲವು ಕ್ಷಣಗಳು ಕೇವಲ ಬದುಕುವುದಕ್ಕಾಗಿ ಇರಬೇಕು. ಒಂದೇ ಮನೆಯಲ್ಲಿದ್ದರೂ ಪ್ರತಿಯೊಬ್ಬರೂ ತಮ್ಮದೇ ಪರದೆಯೊಳಗೆ ಮುಳುಗಿದಾಗ, ಸಂಬಂಧಗಳ ಮೌಲ್ಯ ಕಳೆದುಹೋಗುತ್ತದೆ.

4. ಪ್ರಬುದ್ಧತೆ ಮತ್ತು ಜೀವನದ ಸಮತೋಲನ
ವಯಸ್ಸಾದಂತೆ ಸಮಯದ ನಿಜವಾದ ಮೌಲ್ಯ ಅರಿವಾಗುತ್ತದೆ. ಯೌವನದಲ್ಲಿ ಸಮಯ ಅಪಾರವೆಂದು ಅನಿಸಿದರೂ, ವಯಸ್ಸು ಹೆಚ್ಚಿದಂತೆ ಎಲ್ಲವನ್ನೂ ಸಾಧಿಸುವುದಕ್ಕಿಂತ ಯಾವುದಕ್ಕೆ ಸಮಯ ಕೊಡಬೇಕು ಎಂಬ ಆದ್ಯತೆ ಮುಖ್ಯವಾಗುತ್ತದೆ.

ಕುಟುಂಬದ ಪ್ರತಿಯೊಂದು ಸಮಸ್ಯೆಯನ್ನು ನಾವೇ ಪರಿಹರಿಸಬೇಕು, ಪ್ರತಿಯೊಂದು ಆಹ್ವಾನಕ್ಕೂ ಹೋಗಬೇಕು, ಪ್ರತಿಯೊಂದು ವಿಚಾರಕ್ಕೂ ಅಭಿಪ್ರಾಯ ಹೇಳಬೇಕು ಎಂಬ ಒತ್ತಡವನ್ನು ನಾವೇ ಹಾಕಿಕೊಳ್ಳಬೇಕಿಲ್ಲ. ಕೆಲವೊಮ್ಮೆ ಕೆಲವು ಕೆಲಸಗಳನ್ನು ಮಾಡದಿರುವುದೂ ಒಂದು ಸರಿಯಾದ ನಿರ್ಧಾರ; ಕೆಲವು ಮಾತುಗಳಿಗೆ ಪ್ರತಿಕ್ರಿಯಿಸದಿರುವುದೂ ಒಂದು ಪ್ರಬುದ್ಧತೆ. ಎಲ್ಲವನ್ನೂ ಗೆಲ್ಲಬೇಕಿಲ್ಲ, ಬದಲಾಯಿಸಲಾಗದ ಸಂಗತಿಗಳನ್ನು ಸ್ವೀಕರಿಸುವುದು ಸೋಲಲ್ಲ ? ಅದು ಬದುಕಿನ ಪರಿಪಕ್ವತೆ.

ಈ ಎಲ್ಲ ಗೊಂದಲಗಳ ನಡುವೆ ನಮಗೆ ಬೇಕಿರುವುದು ಮೂರು ಸರಳ ನಿಯಮಗಳು:

1. ನೆನ್ನೆಯಿಂದ ಕಲಿಯಬೇಕು ಆದರೆ ಪಶ್ಚಾತ್ತಾಪದಲ್ಲಿ ಸಿಲುಕಬಾರದು.
2. ನಾಳೆಗೆ ಸಿದ್ಧರಾಗಬೇಕು ಆದರೆ ಅನಿಶ್ಚಿತತೆಗೆ ಭಯಪಡಬಾರದು.
3. ಇಂದನ್ನು ಗೌರವಿಸಬೇಕು ಕಣ್ಣಮುಂದಿರುವ ಜನರು ಮತ್ತು ಕ್ಷಣಗಳನ್ನು ಸಂಪೂರ್ಣವಾಗಿ ಅನುಭವಿಸಬೇಕು.

ನೆನ್ನೆ ನಮ್ಮ ಅನುಭವ, ನಾಳೆ ನಮ್ಮ ನಿರೀಕ್ಷೆ, ಇಂದು ನಮ್ಮ ಅವಕಾಶ. ಎಲ್ಲ ಪ್ರಶ್ನೆಗಳಿಗೂ ಉತ್ತರ ಹುಡುಕುವುದಕ್ಕಿಂತ, ಉತ್ತರ ಸಿಗದ ಪ್ರಶ್ನೆಗಳ ನಡುವೆಯೂ ಸಮತೋಲನದಿಂದ ಮುನ್ನಡೆಯುವುದೇ ಬದುಕಿನ ನಿಜವಾದ ಜಾಣ್ಮೆ.

ಸಮಯ ಪಾಲನೆ : ಆಯುಷ್ಯದ ರಕ್ಷಾಕವಚ

ಗಡಿಯಾರದ ಮುಳ್ಳುಗಳು ಕಾಲವನ್ನು ಅಳೆಯುವುದಷ್ಟೇ ಅಲ್ಲ, ದೇಹದ ಅಂತರಂಗದ ಜೈವಿಕ ಲಯವನ್ನು ನಿಯಂತ್ರಿಸುತ್ತವೆ. ಪ್ರತಿನಿತ್ಯ ನಿಗದಿತ ವೇಳೆಯಲ್ಲಿ ಆಹಾರ, ವಿಶ್ರಾಂತಿ, ಕಾರ್ಯನಿರ್ವಹಣೆಯ ಕ್ರಮಬದ್ಧತೆ ಇದ್ದಾಗ ಅಂತಃಸ್ರಾವಕ ವ್ಯವಸ್ಥೆ ಸಮತೋಲನಗೊಳ್ಳುತ್ತದೆ. ಹಾರ್ಮೋನ್ ಸ್ರಾವ ಸುಗಮವಾಗಿ, ಏಕಾಗ್ರತೆ ವೃದ್ಧಿಸಿ, ದಣಿವು ತಾನಾಗಿಯೇ ಕರಗುತ್ತದೆ. ಇದು ಕೇವಲ ಶಿಸ್ತಲ್ಲ, ದೇಹ–ಮನಸ್ಸಿನ ಸಂವಾದದ ಸಂಗೀತ.

ಸಾಮಾಜಿಕ ಪರಿಧಿಯಲ್ಲಿ, ಸಮಯ ಪಾಲನೆಯು ವಿಶ್ವಾಸಾರ್ಹತೆಯ ಮುದ್ರೆ. ಮಾತು ಮತ್ತು ಕೃತ್ಯಗಳ ನಡುವೆ ಸಿಂಕ್ರನಿ ಕಾಯ್ದುಕೊಳ್ಳುವ ವ್ಯಕ್ತಿಯ ಸುತ್ತ ಸಹಕಾರದ ಆವರಣ ನಿರ್ಮಾಣವಾಗುತ್ತದೆ. ಕುಟುಂಬ, ಕಚೇರಿ, ಸಾರ್ವಜನಿಕ ಬದುಕಿನಲ್ಲಿ ಅನಗತ್ಯ ಗೊಂದಲ, ಅಪನಂಬಿಕೆಯ ಮಂಜು ಕರಗಿ, ಬಾಂಧವ್ಯದ ಕಸುವು ಹೆಚ್ಚುತ್ತದೆ.

ಆರೋಗ್ಯಶಾಸ್ತ್ರದ ಅಧ್ಯಯನಗಳು ಎಚ್ಚರಿಸುವಂತೆ, ಅಸ್ತವ್ಯಸ್ತ ದಿನಚರಿಯು ನಿದ್ರೆಯ ಗುಣಮಟ್ಟವನ್ನು ಅಪಹರಿಸಿ, ಮನಸ್ಸಿನ ಚುರುಕುತನವನ್ನು ಮಂಕಾಗಿಸುತ್ತದೆ. ಆದರೆ ಕ್ರಮಬದ್ಧತೆಯು ಮೆದುಳಿನ ನರಜಾಲವನ್ನು ತೀಕ್ಷ್ಣಗೊಳಿಸಿ, ವಿವೇಚನಾಶಕ್ತಿ ಮತ್ತು ನಿರ್ಧಾರ ಸಾಮರ್ಥ್ಯವನ್ನು ಸಂವರ್ಧಿಸುತ್ತದೆ.

ಆದುದರಿಂದ ಸಮಯವನ್ನು ಗೌರವಿಸುವುದು ಕೇವಲ ಕಾರ್ಯತತ್ಪರತೆಯಲ್ಲ; ಅದು ದೀರ್ಘಾಯುಷ್ಯದ ಚೈತನ್ಯ, ಘನತೆಯ ವ್ಯಕ್ತಿತ್ವ ಮತ್ತು ಸಮಚಿತ್ತದ ಬದುಕಿಗೆ ದಾರಿದೀಪವಾಗುವ ಮೌನ ಜೀವನಮೌಲ್ಯವಾಗಿದೆ.

ಅಂಕಣ-43
ಸಾವು ಸಂಕಟಪಡುವ ಸಂಗತಿಗಳು..!

।ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

। ಡಾ.ಇಂದಿರಾ ಪ್ರಕಾಶ್
ಎಸ್.ಎಸ್., ಶಿವಮೊಗ್ಗ

ಈಗಿನ ಕಾಲ ಹೇಗಿದೆ ಅಂದರೆ, ನಮ್ಮ ಮುಂದೆ ಎರಡು ತರದ ಬುದ್ಧಿವಂತಿಕೆ ಇದೆ. ಒಂದು ನಮ್ಮ ತಾತ–ಮುತ್ತಾತನ ಕಾಲದಿಂದ ಬಂದ, ಬದುಕಿ, ನೋವುಂಡು, ಪ್ರೀತಿ ಮಾಡಿ ಕಲಿತ ನಮ್ಮ ಸಹಜ ಬುದ್ಧಿವಂತಿಕೆ. ಇನ್ನೊಂದು ನಾವೇ ಕಂಪ್ಯೂಟರ್‌ನಲ್ಲಿ ಕಟ್ಟಿದ ಹೊಸ ಬುದ್ಧಿವಂತಿಕೆ, ಅದೇ ಎಐ. ಈಗ ಎಲ್ಲರ ಬಾಯಲ್ಲೂ ಇರುವ ಪ್ರಶ್ನೆ, ಇವೆರಡರಲ್ಲಿ ಯಾರು ದೊಡ್ಡವರು ಅಂತ. ನಿಜ ಹೇಳಬೇಕೆಂದರೆ, ಈ ಜಗಳವೇ ತಪ್ಪು. ಯಾರು ದೊಡ್ಡವರು ಅಂತ ಅಲ್ಲ, ಯಾರಿಂದ ಯಾವ ಕೆಲಸ ಚೆನ್ನಾಗಿ ಆಗುತ್ತದೆ ಅಂತ ನೋಡಬೇಕು.

ಬುದ್ಧಿವಂತಿಕೆ ಅಂದರೆ ಏನು?



ಬುದ್ಧಿವಂತಿಕೆಯ ಎರಡು ಮುಖಗಳು
ಮನುಷ್ಯನ ಭಾವನೆ ಮತ್ತು ಎಐ ವೇಗ

ಮನುಷ್ಯನ ದೊಡ್ಡ ಶಕ್ತಿ ಇರುವುದು ಅವನ ಆಂತರ್ಯದಲ್ಲಿ, ಅವನ ಭಾವನೆಯಲ್ಲಿ. ನಾವು ಸುಮ್ಮನೆ ದತ್ತಾಂಶ ತುಂಬಿಕೊಂಡಿರುವ ಡಬ್ಬ ಅಲ್ಲ. ಉದಾಹರಣೆ ಹೇಳಬೇಕೆಂದರೆ, ಒಂದು ಪುಟ್ಟ ಮಗು ಬೆಂಕಿ ಬಿಸಿ ಅಂತ ಪುಸ್ತಕದಲ್ಲಿ ಓದಿ ಕಲಿಯುವುದಿಲ್ಲ, ಕೈ ಸುಟ್ಟುಕೊಂಡಾಗ ಅದರ ನೋವಿನಿಂದ ಕಲಿಯುತ್ತದೆ. ನಮಗೆ ಸಂದರ್ಭ ಅರ್ಥವಾಗುತ್ತದೆ. ಯಾರೋ ಆಡಿದ ಮಾತಿನ ಹಿಂದಿನ ಕುಚೋದ್ಯ, ಕಣ್ಣಲ್ಲಿ ತುಂಬಿಕೊಂಡಿರುವ ನೋವು, ಮಾತೇ ಆಡದೆ ಸುಮ್ಮನೆ ಕೂತಾಗಲೂ ಹೇಳುವ ಪ್ರೀತಿ, ಇದೆಲ್ಲ ಮನುಷ್ಯನಿಗೆ ಮಾತ್ರ ಅರ್ಥವಾಗುವುದು. ನಮಗೆ ಕಲ್ಪನೆ ಮಾಡುವ ಶಕ್ತಿ ಇದೆ. ಇಲ್ಲದ್ದನ್ನು ಕನಸು ಕಾಣುವ, ಕಥೆ–ಕವನ ಬರೆಯುವ, ಹಾಡು ಕಟ್ಟುವ ಶಕ್ತಿ ನಮ್ಮದು. ಮುಖ್ಯವಾಗಿ ನಮಗೆ ಯಾವುದು ಸರಿ, ಯಾವುದು ತಪ್ಪು ಅನ್ನುವ ನೈತಿಕ ಪ್ರಜ್ಞೆ ಇದೆ. ನಾವು ತಪ್ಪು ಮಾಡುತ್ತೇವೆ, ಆ ತಪ್ಪಿನಿಂದಲೇ ಹೊಸ ಆವಿಷ್ಕಾರ ಮಾಡುತ್ತೇವೆ. ಮನುಷ್ಯ ಕೇವಲ ಉತ್ತರ ಕೊಡುವುದಿಲ್ಲ, ಹೊಸ ಪ್ರಶ್ನೆಗಳನ್ನು ಕೇಳುತ್ತಾನೆ.

ಎಐನ ಬುದ್ಧಿವಂತಿಕೆ ಏನು?

ಎಐಗೆ ಭಾವನೆ ಇಲ್ಲ, ಹಸಿವು ಇಲ್ಲ, ನೋವು ಇಲ್ಲ. ಅದಕ್ಕೆ ಇರುವುದು ಒಂದೇ, ಅಪಾರ ನೆನಪಿನ ಶಕ್ತಿ ಮತ್ತು ಮಿಂಚಿನ ವೇಗ. ನಮಗೆ ಒಂದು ಹೊಸ ಭಾಷೆ ಕಲಿಯಲು ಒಂದು ವರ್ಷ ಬೇಕಾದರೆ, ಎಐಗೆ ಒಂದು ಗಂಟೆಯಲ್ಲಿ ನೂರು ಭಾಷೆಗಳು ಬರುತ್ತವೆ. ನಾವು ಸಾವಿರ ಪುಟದ ಪುಸ್ತಕ ಓದಲು ಒಂದು ತಿಂಗಳು ತೆಗೆದುಕೊಂಡರೆ, ಅದು ಹತ್ತು ಸೆಕೆಂಡುಗಳಲ್ಲಿ ಅದರ ಸಾರಾಂಶ ಕೊಟ್ಟುಬಿಡುತ್ತದೆ. ಪದೇಪದೇ ಮಾಡುವ ಬೇಸರದ ಕೆಲಸ, ದೊಡ್ಡ ದೊಡ್ಡ ಲೆಕ್ಕಾಚಾರ, ಕೋಟಿ ಕೋಟಿ ದತ್ತಾಂಶವನ್ನು ನೋಡಿ ಅದರೊಳಗಿನ ಗುಟ್ಟು ಹೇಳುವುದು, ರಾತ್ರಿ ಹಗಲು ನಿದ್ದೆ ಇಲ್ಲದೆ ಗ್ರಾಹಕರಿಗೆ ಉತ್ತರ ಕೊಡುವುದು, ಇಂತಹ ಕೆಲಸಗಳಲ್ಲಿ ಎಐನ ಪಾತ್ರ ಅತ್ಯುತ್ತಮ. ನಮಗಿಂತ ನೂರು ಪಟ್ಟು ಮುಂದೆ.

ಎಐ ಬಂದರೆ ಕೆಲಸ ಹೋಗುತ್ತ?

ನಿಜ ಹೇಳಬೇಕೆಂದರೆ, ಹೌದು, ಇತ್ತೀಚಿನ ದಿನಗಳಲ್ಲಿ ಕೆಲವು ಕೆಲಸಗಳು ಹೋಗುತ್ತಿವೆ. ಕರೆ ಕೇಂದ್ರ, ದತ್ತಾಂಶ ನಮೂದು, ಸಣ್ಣಪುಟ್ಟ ವಿನ್ಯಾಸ, ಬೆರಳಚ್ಚು, ಸಾಮಾನ್ಯ ಅನುವಾದದಂತಹ ಕೆಲಸಗಳನ್ನು ಈಗ ಎಐ ಮೂಲಕ ಮಾಡಲಾಗುತ್ತಿದೆ. ಮೊದಲು ಒಂದು ಕಂಪನಿಯಲ್ಲಿ ಹತ್ತು ಜನ ಮಾಡುತ್ತಿದ್ದ ಕೆಲಸವನ್ನು ಈಗ ಇಬ್ಬರು ಹುಡುಗರು ಎಐ ಉಪಕರಣಗಳನ್ನು ಬಳಸಿಕೊಂಡು ಮಾಡುತ್ತಿದ್ದಾರೆ. ಇದರಿಂದ ಸಣ್ಣ ಕೆಲಸ ಮಾಡುವವರಿಗೆ, ಹೊಸದನ್ನು ಕಲಿಯದವರಿಗೆ ನಿಜವಾಗಿಯೂ ಕಷ್ಟವಾಗುತ್ತಿದೆ ಮತ್ತು ಆರ್ಥಿಕ ಆತಂಕ ಶುರುವಾಗಿದೆ.

ಆದರೆ ಇನ್ನೊಂದು ಸತ್ಯವನ್ನು ನಾವು ಮರೆಯಬಾರದು. ಇತಿಹಾಸ ನೋಡಿ, ಯಾವುದೇ ತಂತ್ರಜ್ಞಾನ ಬಂದಾಗಲೂ ಮೊದಲು ಭಯ ಇರುತ್ತದೆ. ಕಂಪ್ಯೂಟರ್ ಬಂದಾಗಲೂ ಎಲ್ಲರ ಕೆಲಸ ಹೋಗುತ್ತದೆ ಎಂದು ಭಯಪಟ್ಟೆವು. ಆದರೆ ಏನಾಯಿತು? ಕಂಪ್ಯೂಟರ್ ಲಕ್ಷಾಂತರ ಹೊಸ ಕೆಲಸಗಳನ್ನು ತಂದಿತು. ಎಐ ಕೂಡ ಹಾಗೆಯೇ. ಇಂದು ಸೂಚನಾ ತಜ್ಞರು, ಎಐ ತರಬೇತುದಾರರು, ವೀಡಿಯೊ ಸಂಪಾದಕರಂತಹ ಸಾವಿರಾರು ಹೊಸ ಕೆಲಸಗಳೂ ಹುಟ್ಟಿಕೊಂಡಿವೆ. ಆದ್ದರಿಂದ ತೊಂದರೆ ಎಐನಿಂದ ಬರುವುದಿಲ್ಲ, ಎಐಗೆ ತಕ್ಕಂತೆ ನಾವು ಬದಲಾಗದಿದ್ದರೆ ಬರುತ್ತದೆ. ಕಲಿಯುವವನಿಗೆ ಇದು ವರದಾನ, ಕೂರುವವನಿಗೆ ಶಾಪ. ಯುವಕರೇ ಆಗಲಿ, ಹಳ್ಳಿಯ ರೈತರೇ ಆಗಲಿ, ಹೊಸ ತಂತ್ರಜ್ಞಾನವನ್ನು ಕಲಿತು ಬಳಸಿದರೆ ಮಾತ್ರ ಉಳಿಗಾಲ.

ಲಾಸ್ಟ್ ಸಿಪ್!

ಕಾರು ನಮಗಿಂತ ವೇಗವಾಗಿ ಓಡುತ್ತದೆ ಅಂತ ಕಾರೇ ಬುದ್ಧಿವಂತ ಎನ್ನಲು ಆಗುವುದಿಲ್ಲ ಅಲ್ಲವೇ? ಕಾರು ಒಂದು ಯಂತ್ರ, ಅದನ್ನು ಸರಿಯಾದ ದಾರಿಯಲ್ಲಿ ನಡೆಸುವವನು ಮನುಷ್ಯ. ಎಐ ಕೂಡ ಹಾಗೆಯೇ. ಅದು ನಮ್ಮ ಶತ್ರು ಅಲ್ಲ, ನಮ್ಮ ಜೊತೆಗಾರ, ನಮ್ಮ ಸೂಪರ್ ಪವರ್. ವೇಗದ ಕೆಲಸವನ್ನು ಅದಕ್ಕೆ ಬಿಟ್ಟು, ಯೋಚಿಸುವ, ಪ್ರೀತಿಸುವ, ನಿರ್ಧಾರ ತೆಗೆದುಕೊಳ್ಳುವ ಮನುಷ್ಯತ್ವದ ಕೆಲಸವನ್ನು ನಾವು ಉಳಿಸಿಕೊಳ್ಳೋಣ. ಎಐ ಜೊತೆ ಜಗಳ ಮಾಡಿದರೆ ನಾವು ಸೋಲುತ್ತೇವೆ, ಕೈಜೋಡಿಸಿದರೆ ನಾವು ಗೆಲ್ಲುತ್ತೇವೆ. ಇದು ಭವಿಷ್ಯದ ಸತ್ಯ. ಆದ್ದರಿಂದ ಭಯ ಬೇಡ, ಎಐ ಅನ್ನು ಅರ್ಥಮಾಡಿಕೊಳ್ಳೋಣ, ಬಳಸಿಕೊಳ್ಳೋಣ ಅಲ್ಲವೇ.

ಮನುಷ್ಯನ ಮೈಯಲ್ಲಿ ದೈವದ ಆವಾಹನೆ; ಕೇರಳದ ತೆಯ್ಯಂ!

। ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಮನುಷ್ಯನ ದೇಹದಲ್ಲಿ ದೈವತ್ವದ ದರ್ಶನ, ಬಣ್ಣಗಳ ವೈಭವದಲ್ಲಿ ಭಕ್ತಿಯ ಅನಾವರಣ, ವಾದ್ಯಗಳ ನಾದದಲ್ಲಿ ಆಧ್ಯಾತ್ಮಿಕತೆಯ ಅನುರಣನ?ಇವೆಲ್ಲವೂ ಒಂದಾಗಿ ಸಂಗಮಿಸುವ ಅಪರೂಪದ ಸಾಂಸ್ಕೃತಿಕ ಪರಂಪರೆಯೇ ಕೇರಳದ ತೆಯ್ಯಂ. ಇದು ಕೇವಲ ನೃತ್ಯ ಅಥವಾ ಕಲಾಪ್ರದರ್ಶನವಲ್ಲ; ಶತಮಾನಗಳ ನಂಬಿಕೆ, ಸಂಪ್ರದಾಯ, ಜನಪದ ಇತಿಹಾಸ ಮತ್ತು ಭಕ್ತಿಭಾವವನ್ನು ತನ್ನೊಳಗೆ ಹೊತ್ತಿರುವ ಜೀವಂತ ಆರಾಧನಾ ಪದ್ಧತಿ. ಸಾಮಾನ್ಯ ಮನುಷ್ಯನೊಬ್ಬ ವಿಶೇಷ ವೇಷಭೂಷಣಗಳನ್ನು ಧರಿಸಿ, ದೈವದ ಪ್ರತಿರೂಪವಾಗಿ ಭಕ್ತರ ಮುಂದೆ ಕಾಣಿಸಿಕೊಳ್ಳುವ ಈ ಆಚರಣೆ ನೋಡುಗರ ಮನಸ್ಸಿನಲ್ಲಿ ವಿಸ್ಮಯದ ಜೊತೆಗೆ ಆಧ್ಯಾತ್ಮಿಕ ಭಾವವನ್ನೂ ಮೂಡಿಸುತ್ತದೆ.

ಭಾರತದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಂಸ್ಕೃತಿ ಮತ್ತು ಸಂಪ್ರದಾಯಗಳಿಂದ ವಿಶಿಷ್ಟವಾಗಿದೆ. ಹಸಿರು ಪ್ರಕೃತಿ, ತೆಂಗಿನ ಮರಗಳ ಸಾಲು, ದೇವಾಲಯಗಳು ಮತ್ತು ಜನಪದ ಕಲೆಗಳಿಗೆ ಹೆಸರುವಾಸಿಯಾದ ಕೇರಳದ ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ತೆಯ್ಯಂಗೆ ವಿಶೇಷ ಸ್ಥಾನವಿದೆ. ವಿಶೇಷವಾಗಿ ಉತ್ತರ ಕೇರಳದ ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಪ್ರಸಿದ್ಧವಾಗಿರುವ ಈ ಆಚರಣೆ ಅಲ್ಲಿನ ಜನಜೀವನದೊಂದಿಗೆ ಆಳವಾಗಿ ಬೆಸೆದುಕೊಂಡಿದೆ. ದೇವರು ಕೇವಲ ದೇವಾಲಯದ ಗರ್ಭಗುಡಿಯಲ್ಲಷ್ಟೇ ಅಲ್ಲ, ಜನರ ನಂಬಿಕೆ, ಭಕ್ತಿ ಮತ್ತು ಪರಂಪರೆಯಲ್ಲಿಯೂ ನೆಲೆಸಿದ್ದಾನೆ ಎಂಬ ಭಾವವನ್ನು ತೆಯ್ಯಂ ಪ್ರತಿಬಿಂಬಿಸುತ್ತದೆ.

ತೆಯ್ಯಂನ ಅತ್ಯಂತ ಆಕರ್ಷಕ ವೈಶಿಷ್ಟ್ಯವೆಂದರೆ ಅದರ ವರ್ಣರಂಜಿತ ವೇಷಭೂಷಣಗಳು ಮತ್ತು ವಿಶಿಷ್ಟ ಮುಖವರ್ಣಿಕೆ. ಕೆಂಪು, ಹಳದಿ, ಕಪ್ಪು ಮತ್ತು ಬಿಳಿ ಬಣ್ಣಗಳ ಸಂಯೋಜನೆ ಕಲಾವಿದನಿಗ